# ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899

(ಕರ್ನಾಟಕ ರಾಜ್ಯಪತ್ರ, ಗುರುವಾರ ಮಾರ್ಚ್ 18, 2004 ಭಾಗ-4ಎ, ಪುಟ 177 ರಿಂದ 192ರವರೆಗೆ ಪ್ರಕಟಿಸಲಾಗಿದೆ)

## ಪ್ರಕರಣಗಳ ಅನುಕ್ರಮಣಿಕೆ

**ಪ್ರಕರಣಗಳು:**

### ಪ್ರಾರಂಭಿಕ

1. ಚಿಕ್ಕ ಹೆಸರು ಮತ್ತು ಪ್ರಾರಂಭ

[**2.** x x x]

### ಸಾಮಾನ್ಯ ಪರಿಭಾಷೆಗಳು

3. ಪರಿಭಾಷೆಗಳು

4. ಹಿಂದಿನ ಅಧಿನಿಯಮಿತಿಗಳಿಗೆ ಮೇಲೆ ಹೇಳಿದ ಪರಿಭಾಷೆಗಳ ಅನ್ವಯ

4ಎ. ಕೆಲವು ಅಧಿನಿಯಮಿತಿಗಳಲ್ಲಿ ಬರುವ 'ರಾಜ್ಯ' ಮತ್ತು 'ಮೈಸೂರು ರಾಜ್ಯ' ಎಂಬ ಪದಾವಳಿಗಳ ಪರಿಭಾಷೆ

4ಬಿ. ಕೆಲವು ಅಧಿನಿಯಮಿತಿಗಳಲ್ಲಿ ಬರುವ 'ರಾಜ್ಯ' ಮತ್ತು 'ಕರ್ನಾಟಕ ರಾಜ್ಯ' ಎಂಬ ಪದಾವಳಿಗಳ ಪರಿಭಾಷೆ

### ಅರ್ಥಾನ್ವಯದ ಸಾಮಾನ್ಯ ನಿಯಮಗಳು

5. ಅಧಿನಿಯಮಿತಿಯು ಜಾರಿಗೆ ಬರುವುದು

6. ನಿರಸನದ ಪರಿಣಾಮ

6ಎ. ಅಧಿನಿಯಮದಲ್ಲಿ ಪಾಠದ ತಿದ್ದುಪಡಿ ಮಾಡುವ ಅಧಿನಿಯಮಿತಿಯ ನಿರಸನ

7. ನಿರಸನಗೊಳಿಸಲಾದ ಅಧಿನಿಯಮಿತಿಗಳ ಪುನರುಜ್ಜೀವನ

8. ನಿರಸನಗೊಳಿಸಲಾದ ಅಧಿನಿಯಮಿತಿಗಳಿಗೆ ಮಾಡಿದ ಉಲ್ಲೇಖಗಳನ್ನು ಅರ್ಥೈಸುವುದು

9. ಕಾಲದ ಪ್ರಾರಂಭ ಮತ್ತು ಮುಕ್ತಾಯ

10. ಕಾಲವನ್ನು ಲೆಕ್ಕಹಾಕುವುದು

11. ದೂರಗಳ ಅಳತೆ

12. ಅಧಿನಿಯಮಿತಿಗಳ ಮೇರೆಗೆ ಪ್ರಮಾಣಾನುಸಾರ ಶುಲ್ಕವನ್ನು ತೆಗೆದುಕೊಳ್ಳುವುದು

13. ಲಿಂಗ ಮತ್ತು ವಚನ

### ಅಧಿಕಾರಗಳು ಮತ್ತು ಕಾರ್ಯಕರ್ತರು

14. ಪ್ರದಾನಮಾಡಲಾದ ಅಧಿಕಾರಗಳನ್ನು ಕಾಲಕಾಲಕ್ಕೆ ಚಲಾಯಿಸಬೇಕಾಗಿರುವುದು

15. ನೇಮಕ ಮಾಡುವ ಅಧಿಕಾರವು ಪದನಿಮಿತ್ತವಾಗಿ ನೇಮಕ ಮಾಡುವ ಅಧಿಕಾರವನ್ನು ಒಳಗೊಳ್ಳುವುದು

16. ನೇಮಕ ಮಾಡುವ ಅಧಿಕಾರವು ಅಮಾನತುಗೊಳಿಸುವ ಅಥವಾ ವಜಾ ಮಾಡುವ ಅಧಿಕಾರವನ್ನು ಒಳಗೊಂಡಿರುವುದು

17. ಪ್ರಕಾರ್ಯಕರ್ತರ ಬದಲಿ

18. ಉತ್ತರಾಧಿಕಾರಿಗಳು

19. ಕಚೇರಿ ಮುಖ್ಯಸ್ಥ ಮತ್ತು ಅಧೀನರು

## ಅಧಿನಿಯಮಿತಿಗಳ ಮೇರೆಗೆ ಮಾಡಲಾದ ಆದೇಶಗಳು, ನಿಯಮಗಳು, ಇತ್ಯಾದಿಗಳಿಗೆ ಸಂಬಂಧಿಸಿದ ಉಪಬಂಧಗಳು

20. ಅಧಿನಿಯಮಿತಿಗಳ ಮೇರೆಗೆ ಹೊರಡಿಸಲಾದ ಆದೇಶಗಳು, ಇತ್ಯಾದಿಗಳ ಅರ್ಥಾನ್ವಯ

21. ಅಧಿಸೂಚನೆಗಳು, ಆದೇಶಗಳು, ನಿಯಮಗಳು ಅಥವಾ ಉಪವಿಧಿಗಳನ್ನು ಮಾಡುವ ಅಧಿಕಾರವು ಅವುಗಳಿಗೆ ಸೇರಿಸುವ, ತಿದ್ದುಪಡಿ ಮಾಡುವ, ಅವುಗಳನ್ನು ವ್ಯತ್ಯಾಸಗೊಳಿಸುವ ಅಥವಾ ರದ್ದುಮಾಡುವ ಅಧಿಕಾರವನ್ನು ಒಳಗೊಳ್ಳುವುದು

22. ಅಧಿನಿಯಮಿತಿಯನ್ನು ಅಂಗೀಕಾರ ಮಾಡಿದ ಮತ್ತು ಅದರ ಪ್ರಾರಂಭದ ನಡುವಣ ಅವಧಿಯಲ್ಲಿ ನಿಯಮಗಳನ್ನು ಅಥವಾ ಉಪವಿಧಿಗಳನ್ನು ರಚಿಸುವುದು ಅಥವಾ ಆದೇಶಗಳನ್ನು ಹೊರಡಿಸುವುದು

23. ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ಅಥವಾ ಉಪವಿಧಿಗಳನ್ನು ರಚಿಸುವುದಕ್ಕೆ ಅನ್ವಯಿಸುವ ಉಪಬಂಧಗಳು

24. ನಿರಸನಗೊಳಿಸಲಾದ ಮತ್ತು ಪುನಃ ಅಧಿನಿಯಮಿಸಲಾದ ಅಧಿನಿಯಮಿತಿಗಳ ಮೇರೆಗೆ ಹೊರಡಿಸಲಾದ ಆದೇಶ, ಇತ್ಯಾದಿಗಳ ಮುಂದುವರಿಕೆ

## ಸಂಕೀರ್ಣ

25. ಜುಲ್ಮಾನೆಗಳ ವಸೂಲಿ

26. ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿನಿಯಮಿತಿಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದ ಉಪಬಂಧ

27. ಅಂಚೆಯ ಮೂಲಕ ಜಾರಿ ಎಂಬುದರ ಅರ್ಥ

28. ಅಧಿನಿಯಮಿತಿಗಳನ್ನು ಉದಾಹರಿಸುವುದು

29. ಹಿಂದಿನ ಅಧಿನಿಯಮಿತಿಗಳ, ನಿಯಮಗಳ ಮತ್ತು ಉಪವಿಧಿಗಳ ಉಳಿಸುವಿಕೆ

30. ಆದೇಶಗಳನ್ನು ಮತ್ತು ಅಧಿಸೂಚನೆಗಳನ್ನು ರಾಜಪತ್ರದಲ್ಲಿ ಪ್ರಕಟಿಸುವುದು

31. ಸರ್ಕಾರವು ಕೆಲವು ಸ್ಥಳಗಳಿಗೆ ವಿಸ್ತರಿಸಿದ ಅಥವಾ ಅನ್ವಯಿಸಿದ ಅಧಿನಿಯಮಗಳು ಅಥವಾ ಅಧಿನಿಯಮಗಳ ಉಪಬಂಧಗಳು ಯಾವ ಕಾಲಗಳಲ್ಲಿ ಜಾರಿಗೆ ಬರತಕ್ಕದ್ದೋ ಆ ಕಾಲಗಳನ್ನು ನಿರ್ಧರಿಸುವುದು

31ಎ. ಕೆಲವು ಕಾನೂನುಗಳಿಗೆ ಮಾಡಿದ ಉಲ್ಲೇಖಗಳ ಅರ್ಥಾನ್ವಯ

32. ಅಧ್ಯಾದೇಶಗಳಿಗೆ ಅಧಿನಿಯಮದ ಅನ್ವಯ

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**1985ರ ತಿದ್ದುಪಡಿ ಮಾಡುವ ಅಧಿನಿಯಮ 9.–** ಕಾನೂನಿನ ಉಪಬಂಧದ ನಿರಸನ ಅಥವಾ ಅಂಥ ಉಪಬಂಧದ ಲೋಪ ಅಥವಾ ಬಿಟ್ಟುಬಿಡುವಿಕೆ ಇವುಗಳ ನಡುವೆ ಮೂಲಭೂತವಾಗಿ ಯಾವುದೇ ವ್ಯತ್ಯಾಸವಿಲ್ಲದಿರುವುದರಿಂದ, ಈ ಎಲ್ಲ ವರ್ಷಗಳಲ್ಲಿ ನಿರಸನ ಅಥವಾ ಲೋಪಿಸುವುದು ಅಥವಾ ಬಿಟ್ಟುಬಿಡುವುದು ಎಂಬ ಪದಪ್ರಯೋಗವನ್ನು ಎಲ್ಲ ಕಾನೂನುಗಳಲ್ಲಿ, ಕಾನೂನಿನ ಉಪಬಂಧವನ್ನು ನಿರಸನಗೊಳಿಸಲು ಬಳಸಲಾಗುತ್ತಿತ್ತು.

ಆದಾಗ್ಯೂ, ಕರ್ನಾಟಕ ಉಚ್ಚ ನ್ಯಾಯಾಲಯವು, (1981 ರಲ್ಲಿ) 128 ಐಟಿಆರ್ 547 ರಲ್ಲಿ ವರದಿಯಾಗಿರುವ ಆರ್. ಅಬ್ದುಲ್ ಅಜೀಜ್ ವಿರುದ್ಧ ಕರ್ನಾಟಕ ಆದಾಯ ತೆರಿಗೆ ಆಯುಕ್ತರ

ಮೊಕದ್ದಮೆಯಲ್ಲಿ, ನಿರಸನ ಎಂಬ ಪದಪ್ರಯೋಗವು, ಲೋಪಿಸುವುದು ಅಥವಾ ಬಿಟ್ಟುಬಿಡುವುದು ಎಂಬ ಪದಪ್ರಯೋಗಕ್ಕಿಂತ ಭಿನ್ನವಾದುದು ಎಂಬ ಅಭಿಪ್ರಾಯವನ್ನು ಇತ್ತೀಚೆಗೆ ವ್ಯಕ್ತಪಡಿಸಿದೆ. ಇದರಿಂದ ವಿಸಂಗತ ಸನ್ನಿವೇಶ ಉಂಟಾಗಿದ್ದು ಆ ಮೂಲಕ ಅನುದ್ದೇಶಿತ ಪರಿಣಾಮಗಳು ಉಂಟಾಗುವ ಸಂಭವವಿದೆ.

ಈ ವಿಸಂಗತತೆಯನ್ನು ನಿವಾರಿಸುವ ದೃಷ್ಟಿಯಿಂದ ನಿರಸನ ಎಂಬ ಪದದ ಪರಿಧಿಯೊಳಗೆ ಲೋಪಗೊಳಿಸುವುದು ಮತ್ತು ಬಿಟ್ಟುಬಿಡುವುದು ಎಂಬ ಪದಗಳನ್ನು ನಿರ್ದಿಷ್ಟವಾಗಿ ಸೇರಿಸಲು ಉದ್ದೇಶಿಸಲಾಗಿದೆ. ಇತರ ಕೆಲವು ಔಪಚಾರಿಕ ತಿದ್ದುಪಡಿಗಳನ್ನು ಮಾಡಲು ಈ ಅವಕಾಶವನ್ನು ಬಳಸಿಕೊಳ್ಳಲಾಗಿದೆ.

ಆದ್ದರಿಂದ ಈ ವಿಧೇಯಕ.

**2003ರ ತಿದ್ದುಪಡಿ ಮಾಡುವ ಅಧಿನಿಯಮ 13.–** ಕರ್ನಾಟಕ ಅಧಿನಿಯಮಗಳ ಇಂದಿನವರೆಗೆ ಇರುವಂತೆ ಸಂಹಿತೆಗಳ ಸಂಪುಟಗಳನ್ನು ಸಿದ್ಧಪಡಿಸುವುದು ಮತ್ತು ಪ್ರಯೋಜನ ಅವಧಿ ಪೂರೈಸಿರುವ ಎಲ್ಲ ಅಧಿನಿಯಮಗಳನ್ನು ಮತ್ತು ಕಾಲಕಾಲಕ್ಕೆ ತಿದ್ದುಪಡಿ ಮಾಡಲಾದ ಅಧಿನಿಯಮಗಳನ್ನು ನಿರಸನಗೊಳಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಮೇಲಿನ ಉದ್ದೇಶಕ್ಕಾಗಿ ಸರ್ಕಾರವು ಏಕ ಸದಸ್ಯ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿಯು, 1.11.1956 ರಿಂದ 31.12.2000ದ ವರೆಗಿನ ಕರ್ನಾಟಕ ಅಧಿನಿಯಮಗಳನ್ನು ಪರಿಶೀಲಿಸಿ, ಈ ಮುಂದಿನ ಅಧಿನಿಯಮಗಳನ್ನು ನಿರಸನಗೊಳಿಸುವುದಕ್ಕಾಗಿ "ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2002" ಎಂಬ ಈ ವಿಧೇಯಕವನ್ನು ಪ್ರಸ್ತಾಪಿಸಿದೆ.

x x x x

ಈ ವಿಧೇಯಕವು, ಅವಶ್ಯಕವೆಂದು ಭಾವಿಸಲಾದ ಕೆಲವು ಅಧಿನಿಯಮಗಳ ತಿದ್ದುಪಡಿಗಳನ್ನೂ ಸಹ ಒಳಗೊಂಡಿರುತ್ತದೆ.

ಆದ್ದರಿಂದ ಈ ವಿಧೇಯಕ.

(2002ರ ವಿಧಾನ ಪರಿಷತ್ತಿನ ವಿಧೇಯಕ ಸಂಖ್ಯೆ 4 ರಿಂದ ಪಡೆಯಲಾಗಿದೆ.)

* * * *

# 1899ರ [1][ಕರ್ನಾಟಕ][1] ಅಧಿನಿಯಮ ಸಂಖ್ಯೆ III

# [1][ಕರ್ನಾಟಕ][1] ಸಾಮಾನ್ಯ ಖಂಡಗಳ ಅಧಿನಿಯಮ, 1899

(1899ರ ಜುಲೈ 3ನೇ ದಿನದಂದು ಅಂಗೀಕರಿಸಲಾಗಿದೆ.)

(1930ರ XII, 1949ರ VII, 1950ರ X, 1953ರ XII, 2003ರ XIII ರ ಅಧಿನಿಯಮ, ಕಾನೂನುಗಳ ಅಳವಡಿಕೆ ಆದೇಶಗಳು. 1956, 1973 ಮತ್ತು 1985ರ 9 ಇವುಗಳ ಮೂಲಕ ತಿದ್ದುಪಡಿಯಾದಂತೆ.)

**[1][ಮೈಸೂರು ಅಧಿನಿಯಮಗಳಲ್ಲಿ ಮತ್ತು ಕರ್ನಾಟಕ ಅಧಿನಿಯಮಗಳ][1]ಲ್ಲಿ ಬಳಸಲಾಗಿರುವ ಭಾಷೆಯನ್ನು ಮತ್ತಷ್ಟು ಸಂಕ್ಷಿಪ್ತಗೊಳಿಸುವುದಕ್ಕಾಗಿ ಮತ್ತು ಇತರ ಉದ್ದೇಶಗಳಿಗಾಗಿ ರಚಿಸಲಾದ ಒಂದು ಅಧಿನಿಯಮ.**

[1][ಮೈಸೂರು ಅಧಿನಿಯಮಗಳಲ್ಲಿ ಮತ್ತು ಕರ್ನಾಟಕ ಅಧಿನಿಯಮಗಳ][1]ಲ್ಲಿ ಬಳಸಲಾದ ಭಾಷೆಯನ್ನು ಮತ್ತಷ್ಟು ಸಂಕ್ಷಿಪ್ತಗೊಳಿಸುವುದು ಮತ್ತು ಆ ಅಧಿನಿಯಮಿತಿಗಳಿಗೆ ಸಂಬಂಧಪಟ್ಟ ಇತರ ಕೆಲವು ಉಪಬಂಧಗಳನ್ನು ರಚಿಸುವುದು ಯುಕ್ತವಾಗಿರುವುದರಿಂದ, ಘನತೆವೆತ್ತ ರಾಜಪ್ರತಿನಿಧಿ ಮಹಾರಾಣಿಯವರು ಈ ಮುಂದಿನಂತೆ ಅಧಿನಿಯಮವನ್ನು ರಚಿಸಿದ್ದಾರೆ:–

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಪ್ರಾರಂಭಿಕ

1. **ಚಿಕ್ಕ ಹೆಸರು, [1][ಪ್ರಾರಂಭ ಮತ್ತು ವ್ಯಾಪ್ತಿ][1].–** (1) [2][ಈ ಅಧಿನಿಯಮವನ್ನು [3][ಕರ್ನಾಟಕ][3] ಸಾಮಾನ್ಯ ಖಂಡಗಳ ಅಧಿನಿಯಮ, 1899 ಎಂದು ಕರೆಯತಕ್ಕದ್ದು.][2]

1. 2003ರ ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 2002 (2003ರ 13)ರ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಪ್ರತಿಯೋಜಿಸಲಾಗಿದೆ.
2. 1950ರ ಅಧಿನಿಯಮ ಸಂಖ್ಯೆ X ರ ಮೂಲಕ ಪ್ರತಿಯೋಜಿಸಲಾಗಿದೆ.
3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

[1][**2.** xxx][1]

4. 2ನೇ ಪ್ರಕರಣ ಮತ್ತು ಅನುಸೂಚಿಯನ್ನು 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಬಿಟ್ಟುಬಿಡಲಾಗಿದೆ.

[5][3. ಇದು ಇಡೀ ಕರ್ನಾಟಕ ರಾಜ್ಯಕ್ಕೆ ಪ್ರಾಪ್ತವಾಗುತ್ತದೆ.][5]

5. 2003ರ ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ, 2002 (2003ರ 13)ರ ಮೂಲಕ 1.11.1956 ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

---

## ಸಾಮಾನ್ಯ ಪರಿಭಾಷೆಗಳು

**3. ಪರಿಭಾಷೆಗಳು.–** ಈ ಅಧಿನಿಯಮದಲ್ಲಿ ಮತ್ತು ಈ ಅಧಿನಿಯಮದ ಪ್ರಾರಂಭದ ತರುವಾಯ ರಚಿಸಲಾದ ಎಲ್ಲ [1][ಮೈಸೂರು ಅಧಿನಿಯಮಗಳು ಮತ್ತು ಕರ್ನಾಟಕ ಅಧಿನಿಯಮಗಳ][1]ಲ್ಲಿ ವಿಷಯ ಅಥವಾ ಸಂರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು,–

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(1) "ದುಷ್ಪ್ರೇರಿಸು" ಎಂಬುದು ಅದರ ವ್ಯಾಕರಣ ವ್ಯತ್ಯಾಸಗಳು ಮತ್ತು ಸಜಾತೀಯ ಪದಾವಳಿಗಳೊಂದಿಗೆ, ಭಾರತ ದಂಡ ಸಂಹಿತೆಯಲ್ಲಿ ಅದಕ್ಕೆ ನೀಡಲಾಗಿರುವ ಅರ್ಥವನ್ನೇ ಹೊಂದಿರತಕ್ಕದ್ದು;

(2) "ಕೃತ್ಯ" ಎಂಬುದನ್ನು ಒಂದು ಅಪರಾಧಕ್ಕೆ ಅಥವಾ ಒಂದು ಸಿವಿಲ್ ಅಕ್ರಮಕ್ಕೆ ಸಂಬಂಧಿಸಿದಂತೆ ಬಳಸಿದಾಗ, ಅದು ಕೃತ್ಯಗಳ ಸರಣಿಯನ್ನು ಒಳಗೊಳ್ಳತಕ್ಕದ್ದು ಮತ್ತು ಮಾಡಿದ ಕೃತ್ಯಗಳನ್ನು ಹೇಳುವ ಪದಗಳು ಕಾನೂನು ಸಮ್ಮತವಲ್ಲದ ಲೋಪಗಳಿಗೂ ಸಹ ವ್ಯಾಪ್ತವಾಗತಕ್ಕದ್ದು;

(3) "ಶಪಥ ಪತ್ರ" ಎಂಬುದು, ಪ್ರಮಾಣ ಮಾಡುವುದಕ್ಕೆ ಬದಲಾಗಿ ಪ್ರತಿಜ್ಞೆ ಮಾಡಲು ಅಥವಾ ಘೋಷಣೆ ಮಾಡಲು ಕಾನೂನು ಮೂಲಕ ಅನುಮತಿಸಲಾದ ವ್ಯಕ್ತಿಗಳ ಸಂದರ್ಭದಲ್ಲಿ ಪ್ರತಿಜ್ಞಾ ವಚನ ಮತ್ತು ಘೋಷಣೆಯನ್ನು ಒಳಗೊಳ್ಳತಕ್ಕದ್ದು;

(4) "ಬ್ಯಾರಿಸ್ಟರ್" ಎಂಬುದಕ್ಕೆ, ಇಂಗೆಂಡಿನ ಅಥವಾ ಐರ್ಲೆಂಡಿನ ಒಬ್ಬ ಬ್ಯಾರಿಸ್ಟರ್, ಅಥವಾ ಸ್ಕಾಟ್‌ಲ್ಯಾಂಡಿನ ನ್ಯಾಯವಾದಿಗಳ ನಿಕಾಯದ ಒಬ್ಬ ಸದಸ್ಯ ಎಂದು ಅರ್ಥವಿರತಕ್ಕದ್ದು;

[6][(5) "ಬ್ರಿಟೀಷ್ ಭಾರತ" ಎಂಬುದಕ್ಕೆ ಭಾರತ ಸರ್ಕಾರದ ಅಧಿನಿಯಮ, 1935 ರ III ನೇ ಭಾಗವು ಪ್ರಾರಂಭವಾಗುವುದಕ್ಕೆ ಮುಂಚಿನ ಅವಧಿಗೆ ಸಂಬಂಧಿಸಿದಂತೆ ಭಾರತದ ಗೌರ್ನರ್ ಜನರಲ್ಲನ ಮೂಲಕ ಅಥವಾ ಭಾರತದ ಗೌರ್ನರ್ ಜನರಲ್ಲನಿಗೆ ಅಧೀನನಾಗಿರುವ ಯಾರೇ ಗೌರ್ನರನ ಅಥವಾ ಅಧೀನ ಅಧಿಕಾರಿಯ ಮೂಲಕ ಹಿಸ್ ಮೆಜೆಸ್ಟಿಯ ಆಳ್ವಿಕೆಗೆ ತತ್ಕಾಲದಲ್ಲಿ ಒಳಪಟ್ಟಿರುವ ಹಿಸ್ ಮೆಜೆಸ್ಟಿಯ ಆಧಿಪತ್ಯಗಳೊಳಗಿನ ಎಲ್ಲ ರಾಜ್ಯಕ್ಷೇತ್ರಗಳು ಮತ್ತು ಸ್ಥಳಗಳು ಎಂಬ ಅರ್ಥವಿರತಕ್ಕದ್ದು ಮತ್ತು ಆ ದಿನಾಂಕದ ತರುವಾಯದ ಮತ್ತು ಭಾರತದ ಅಧಿಪತ್ಯ ಸ್ಥಾಪನೆಯಾದ ದಿನಾಂಕಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ ಗವರ್ನರುಗಳ ಪ್ರಾಂತ್ಯಗಳಲ್ಲಿ ಮತ್ತು ಚೀಫ್ ಕಮಿಷನರನ ಪ್ರಾಂತ್ಯಗಳಲ್ಲಿ ತತ್ಕಾಲದಲ್ಲಿ ಒಳಗೊಂಡ ಎಲ್ಲ ರಾಜ್ಯಕ್ಷೇತ್ರಗಳು ಎಂಬ ಅರ್ಥವಿರತಕ್ಕದ್ದು;][6]

6. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ.

[1][(5ಎ) "ಕೇಂದ್ರ ಅಧಿನಿಯಮ" ಎಂಬುದಕ್ಕೆ ಸಂಸತ್ತಿನ ಅಧಿನಿಯಮವೆಂದು ಅರ್ಥವಿರತಕ್ಕದ್ದು ಮತ್ತು ಅದು,-

(ಎ) ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ಆಧಿಪತ್ಯದ ವಿಧಾನ ಮಂಡಲವು ಅಥವಾ ಭಾರತ ವಿಧಾನ ಮಂಡಲವು ಅಂಗೀಕರಿಸಿದ ಅಧಿನಿಯಮವನ್ನು ಒಳಗೊಳ್ಳತಕ್ಕದ್ದು, ಮತ್ತು

(ಬಿ) ಅಂಥ ಪ್ರಾರಂಭಕ್ಕೆ ಮುಂಚೆ ಪರಿಷತ್ತನ್ನೊಳಗೊಂಡ ಗವರ್ನರ್ ಜನರಲ್ ಅಥವಾ ಗೌರ್ನರ್ ಜನರಲ್ಲನು ತನ್ನ ಕಾನೂನು ರಚನಾ ಸಾಮರ್ಥ್ಯದಲ್ಲಿ ರಚಿಸಿದ ಅಧಿನಿಯಮವನ್ನು ಒಳಗೊಳ್ಳತಕ್ಕದ್ದು;

(5ಬಿ) "ಕೇಂದ್ರ ಸರ್ಕಾರ" ಎಂಬುದಕ್ಕೆ,-

(ಎ) ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಮಾಡಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ ಗೌರ್ನರ್ ಜನರಲ್ ಅಥವಾ ಸಂದರ್ಭಾನುಸಾರ ಪರಿಷತ್ತನ್ನೊಳಗೊಂಡ ಗೌರ್ನರ್ ಜನರಲ್ ಎಂದು ಅರ್ಥವಿರತಕ್ಕದ್ದು; ಮತ್ತು ಅದು, (i) ಭಾರತ ಸರ್ಕಾರದ ಅಧಿನಿಯಮ, 1935ರ 124ನೇ ಪ್ರಕರಣದ (1)ನೇ ಉಪ ಪ್ರಕರಣದ ಅಡಿಯಲ್ಲಿ ಒಂದು ಪ್ರಾಂತೀಯ ಸರ್ಕಾರಕ್ಕೆ ವಹಿಸಲಾದ ಪ್ರಕಾರ್ಯಗಳಿಗೆ ಸಂಬಂಧಪಟ್ಟಂತೆ, ಆ ಉಪಪ್ರಕರಣದ ಅಡಿಯಲ್ಲಿ ಪ್ರಾಂತೀಯ ಸರ್ಕಾರಕ್ಕೆ ನೀಡಲಾದ ಅಧಿಕಾರ

ವ್ಯಾಪ್ತಿಯೊಳಗೆ ಕಾರ್ಯ ನಿರ್ವಹಿಸುವ ಪ್ರಾಂತೀಯ ಸರ್ಕಾರವನ್ನು ಒಳಗೊಳ್ಳತಕ್ಕದ್ದು; ಮತ್ತು (ii) ಮುಖ್ಯ ಆಯುಕ್ತರ ಪ್ರಾಂತ್ಯದ ಆಡಳಿತಕ್ಕೆ ಸಂಬಂಧಪಟ್ಟಂತೆ, ಸದರಿ ಅಧಿನಿಯಮದ 94ನೇ ಪ್ರಕರಣದ (3)ನೇ ಉಪಪ್ರಕರಣದ ಅಡಿಯಲ್ಲಿ ಮುಖ್ಯ ಆಯುಕ್ತರಿಗೆ ನೀಡಲಾದ ಅಧಿಕಾರ ವ್ಯಾಪ್ತಿಯೊಳಗೆ ಕಾರ್ಯನಿರ್ವಹಿಸುವ ಮುಖ್ಯ ಆಯುಕ್ತರನ್ನು ಒಳಗೊಳ್ಳತಕ್ಕದ್ದು; ಮತ್ತು

(ಬಿ) ಸಂವಿಧಾನವು ಪ್ರಾರಂಭವಾದ ತರುವಾಯ ಮಾಡಲಾದ ಅಥವಾ ಮಾಡಬೇಕಾದ ಯಾವುದೇ ಕಾರ್ಯದ ಸಂಬಂಧದಲ್ಲಿ ರಾಷ್ಟ್ರಪತಿ ಎಂಬ ಅರ್ಥವಿರತಕ್ಕದ್ದು; ಮತ್ತು ಅದು, (i) ರಾಜ್ಯ ಸರ್ಕಾರಕ್ಕೆ ಸಂವಿಧಾನದ 258ನೇ ಅನುಚ್ಛೇದದ (1)ನೇ ಖಂಡದ ಅಡಿಯಲ್ಲಿ ವಹಿಸಲಾದ ಪ್ರಕಾರ್ಯಗಳ ಸಂಬಂಧದಲ್ಲಿ ಆ ಖಂಡದ ಅಡಿಯಲ್ಲಿ ಆ ರಾಜ್ಯ ಸರ್ಕಾರಕ್ಕೆ ನೀಡಲಾದ ಅಧಿಕಾರ ವ್ಯಾಪ್ತಿಯೊಳಗೆ ಕಾರ್ಯ ನಿರ್ವಹಿಸುತ್ತಿರುವ ರಾಜ್ಯ ಸರ್ಕಾರವನ್ನು ಒಳಗೊಳ್ಳತಕ್ಕದ್ದು; [2][(ii) ಸಂವಿಧಾನದ (ಏಳನೇ ತಿದ್ದುಪಡಿ) ಅಧಿನಿಯಮ, 1956ರ ಪ್ರಾರಂಭಕ್ಕೆ ಮುಂಚೆ 'ಸಿ' ಭಾಗದ ರಾಜ್ಯದ ಆಡಳಿತಕ್ಕೆ ಸಂಬಂಧಪಟ್ಟಂತೆ,][2] ಮುಖ್ಯ ಆಯುಕ್ತ ಅಥವಾ ಲೆಫ್ಟಿನೆಂಟ್ ಗವರ್ನರ್ ಅಥವಾ ನೆರೆರಾಜ್ಯದ ಸರ್ಕಾರ ಅಥವಾ ಸಂವಿಧಾನದ 239ನೆಯ ಅನುಚ್ಛೇದ ಅಥವಾ ಸಂದರ್ಭಾನುಸಾರ 243ನೇ ಅನುಚ್ಛೇದದ ಅಡಿಯಲ್ಲಿ ಅವನಿಗೆ ಅಥವಾ ಅದಕ್ಕೆ ಕೊಡಲಾದ ಅಧಿಕಾರದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಇತರ ಪ್ರಾಧಿಕಾರ [2][ಮತ್ತು (iii) ಒಕ್ಕೂಟ ರಾಜ್ಯಕ್ಷೇತ್ರದ ಆಡಳಿತಕ್ಕೆ ಸಂಬಂಧಪಟ್ಟಂತೆ, ಸಂವಿಧಾನದ 239ನೇ ಅನುಚ್ಛೇದದ ಅಡಿಯಲ್ಲಿ ಅವನಿಗೆ ಕೊಡಲಾದ ಅಧಿಕಾರ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅದರ ಆಡಳಿತಗಾರ][2] - ಇವರನ್ನು ಒಳಗೊಳ್ಳತಕ್ಕದ್ದು;][1]

1. 1953 ರ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(6) "ಅಧ್ಯಾಯ" ಎಂದರೆ, ಆ ಪದವು ಯಾವ ಅಧಿನಿಯಮದಲ್ಲಿ ಬರುವುದೋ ಅದರ ಅಧ್ಯಾಯ;

[3][(7) "ಮುಖ್ಯ ರೆವಿನ್ಯೂ ನಿಯಂತ್ರಣ ಪ್ರಾಧಿಕಾರ" ಅಥವಾ "ಮುಖ್ಯ ರೆವಿನ್ಯೂ ಪ್ರಾಧಿಕಾರ" ಎಂಬುದಕ್ಕೆ ರಾಜ್ಯ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸ ಬಹುದಾದಂಥ ಪ್ರಾಧಿಕಾರ ಎಂಬ ಅರ್ಥವಿರತಕ್ಕದ್ದು;][3]

3. 1953ರ ಅಧಿನಿಯಮ 12ರ ಮೂಲಕ ಪ್ರತಿಯೋಜಿಸಲಾಗಿದೆ

[1][(7ಎ) "ಬೆಂಗಳೂರು ನಗರ" ಎಂಬುದಕ್ಕೆ ಬೆಂಗಳೂರು ನಗರದ ಪುರಸಭಾ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಅಧಿನಿಯಮದ ಅಡಿಯಲ್ಲಿ ಬೆಂಗಳೂರು ನಗರವೆಂದು ಆಗಿಂದಾಗ್ಗೆ ಘೋಷಿತವಾಗಿರುವಂಥ ಸ್ಥಳೀಯ ಪ್ರದೇಶ ಎಂಬ ಅರ್ಥವಿರತಕ್ಕದ್ದು;][1]

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

(8) "ಪ್ರಾರಂಭ" ಎಂಬ ಪದವನ್ನು ಒಂದು ಅಧಿನಿಯಮಕ್ಕೆ ಸಂಬಂಧಪಟ್ಟಂತೆ ಬಳಸಿದಾಗ ಆ ಅಧಿನಿಯಮವು ಜಾರಿಗೆ ಬರುವಂಥ ದಿನಾಂಕ ಎಂಬ ಅರ್ಥವಿರತಕ್ಕದ್ದು;

[1][(8ಎ) "ಸಂವಿಧಾನ" ಎಂದರೆ ಭಾರತದ ಸಂವಿಧಾನ ಎಂದು ಅರ್ಥವಾಗತಕ್ಕದ್ದು;

(8ಬಿ) "ಕಾನ್ಸುಲರ್ ಅಧಿಕಾರಿ " ಎಂಬುದು ಕಾನ್ಸುಲ್ ಜನರಲ್, ಕಾನ್ಸುಲ್, ಉಪಕಾನ್ಸುಲ್, ಕಾನ್ಸುಲರ್ ಏಜೆಂಟ್, ಪ್ರೋ ಕಾನ್ಸುಲ್ ಮತ್ತು ತತ್ಕಾಲದಲ್ಲಿ ಕಾನ್ಸುಲ್ ಜನರಲ್ಲನ, ಕಾನ್ಸುಲ್‌ನ, ವೈಸ್ ಕಾನ್ಸುಲ್‌ನ ಅಥವಾ ಕಾನ್ಸುಲರ್ ಏಜೆಂಟನ ಕರ್ತವ್ಯಗಳನ್ನು ನೆರವೇರಿಸಲು ಅಧಿಕಾರ ಪಡೆದಿರುವ ಯಾರೇ ವ್ಯಕ್ತಿಯನ್ನು ಒಳಗೊಳ್ಳತಕ್ಕದ್ದು;][1]

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

(9) "ಜಿಲ್ಲಾಧಿಕಾರಿ" ಎಂಬುದಕ್ಕೆ ಒಂದು ಜಿಲ್ಲೆಯ ರೆವಿನ್ಯೂ ಆಡಳಿತದ ಪ್ರಭಾರದಲ್ಲಿರುವ ಮುಖ್ಯ ಅಧಿಕಾರಿ ಎಂಬ ಅರ್ಥವಿರತಕ್ಕದ್ದು;

(10) "ಜಿಲ್ಲಾ ನ್ಯಾಯಾಧೀಶ" ಎಂಬುದಕ್ಕೆ ಮೂಲ ಅಧಿಕಾರ ವ್ಯಾಪ್ತಿಯುಳ್ಳ ಪ್ರಧಾನ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶ ಎಂಬ ಅರ್ಥವಿರತಕ್ಕದ್ದು; [1][ಆದರೆ ಮೂಲ ಸಿವಿಲ್ ಕ್ಷೇತ್ರಾಧಿಕಾರವನ್ನು ಚಲಾಯಿಸುವಲ್ಲಿ ಉಚ್ಚ ನ್ಯಾಯಾಲಯವು ಇದರಲ್ಲಿ ಒಳಗೊಳ್ಳತಕ್ಕದ್ದಲ್ಲ;][1]

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

[2][(10ಎ) "ವಿಭಾಗಾಧಿಕಾರಿ" ಎಂಬುದಕ್ಕೆ [3][ಕರ್ನಾಟಕ ಭೂ ಕಂದಾಯ ಅಧಿನಿಯಮ, 1964][3] ರ ಅಡಿಯಲ್ಲಿ ನೇಮಕಗೊಂಡ ಒಂದು ವಿಭಾಗದ ವಿಭಾಗೀಯ ಕಮಿಷನರ್ ಎಂದು ಅರ್ಥವಾಗತಕ್ಕದ್ದು;][2]

1. 1956 ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(11) "ದಸ್ತಾವೇಜು" ಎಂಬುದು ಅಕ್ಷರಗಳು, ಅಂಕಿಗಳು ಅಥವಾ ಗುರುತುಗಳ ಮೂಲಕ ಅಥವಾ ಅವುಗಳಲ್ಲಿ ಒಂದಕ್ಕಿಂತ ಹೆಚ್ಚಿನವುಗಳನ್ನು ಉಪಯೋಗಿಸುವ ಮೂಲಕ ಯಾವ ವಿಷಯವನ್ನು ಅಭಿಲೇಖಿಸುವುದಕ್ಕಾಗಿ ಉಪಯೋಗಿಸಬೇಕೆಂದು ಉದ್ದೇಶಿಸಲಾಗಿದೆಯೋ ಅಥವಾ ಹಾಗೆ ಉಪಯೋಗಿಸಬಹುದಾಗಿದೆಯೋ ಆ ಯಾವುದೇ ವಸ್ತುವಿನ ಮೇಲೆ ಬರೆಯಲಾದ, ವ್ಯಕ್ತಗೊಳಿಸಲಾದ ಅಥವಾ ವಿವರಿಸಲಾದ ಯಾವುದೇ ವಿಷಯವನ್ನು ಒಳಗೊಳ್ಳತಕ್ಕದ್ದು;

(12) "ಅಧಿನಿಯಮಿತಿ" ಎಂಬುದು ಈ ಮುಂದಿನವುಗಳನ್ನು ಒಳಗೊಳ್ಳತಕ್ಕದ್ದು,-

(ಎ) [4][ಮೈಸೂರು ಅಧಿನಿಯಮ;][4]

---

4. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ.

[3][(ಎ1) ಕರ್ನಾಟಕ ಅಧಿನಿಯಮ;][3]

3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಬಿ) [3][ಮೈಸೂರು ಪ್ರದೇಶ][3] ದಲ್ಲಿ ಕಾನೂನಾಗಿ ಜಾರಿಗೊಳಿಸಿದ, ಪರಿಷತ್ತಿನಲ್ಲಿರುವ ಭಾರತದ ಗೌರ್ನರ್ ಜನರಲ್ ಅಥವಾ ಭಾರತದ ಸ್ಥಳೀಯ ವಿಧಾನ ಮಂಡಲದ ಒಂದು ಅಧಿನಿಯಮ;

3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಸಿ) [3][ಮೈಸೂರು ಪ್ರದೇಶ][3] ದಲ್ಲಿ ಕಾನೂನಾಗಿ ನಿಯಮಿಸಲಾಗಿರುವ (ಯಾವುದೇ ಕಾನೂನಿನ ಮೂಲಕ ಅಥವಾ ಮೇಲೆ ಹೇಳಲಾದಂಥ ಯಾವುದೇ ಅಧಿನಿಯಮದ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಚಿಸಿದ ನಿಯಮಗಳನ್ನು ಹೊರತುಪಡಿಸಿ) ನಿಯಮಗಳ ಒಂದು ಸಮುದಾಯ ; ಮತ್ತು

---

3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

---

[2][(ಸಿ1) ಮುಂಬಯಿ ಸಾಮಾನ್ಯ ಖಂಡಗಳ ಅಧಿನಿಯಮ, 1904 (1904ರ ಮುಂಬಯಿ ಅಧಿನಿಯಮ 1) ರ 3 ನೇ ಪ್ರಕರಣದ (5) ನೇ ಖಂಡದಲ್ಲಿ ಪರಿಭಾಷಿಸಲಾದಂಥ ಒಂದು ಮುಂಬಯಿ ಅಧಿನಿಯಮ;

(ಸಿ2) ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿರುವಂಥ ಕೊಡಗು ಅಧಿನಿಯಮ ಅಥವಾ ವಿನಿಯಮ;

(ಸಿ3) ಹೈದರಾಬಾದ್ ಸಾಮಾನ್ಯ ಖಂಡಗಳ ಅಧಿನಿಯಮ, 1308 ಫಸಲಿಯ (1308 ಫಸಲಿಯ ಹೈದರಾಬಾದ್ ಅಧಿನಿಯಮ III) 2 ನೇ ಪ್ರಕರಣದ (1ಎ) ಖಂಡದಲ್ಲಿ ಪರಿಭಾಷಿಸಲಾದ ಹೈದರಾಬಾದ್ ಕಾನೂನು;

(ಸಿ4) ಮದರಾಸು ಸಾಮಾನ್ಯ ಖಂಡಗಳ ಅಧಿನಿಯಮ, 1891 (1891 ರ ಮದರಾಸು ಅಧಿನಿಯಮ 1) ರ 3ನೇ ಪ್ರಕರಣದ (17ಎ) ಖಂಡದಲ್ಲಿ ಪರಿಭಾಷಿಸಲಾದ ಮದರಾಸು ಅಧಿನಿಯಮ; ಮತ್ತು][2]

2. 1956 ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಡಿ) [4][ಯಾವುದೇ [3][ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][3]][4] ದಲ್ಲಿ ಅಥವಾ ಹಿಂದೆ ಹೇಳಿದಂಥ ಯಾವುದೇ ಅಧಿನಿಯಮ ಅಥವಾ ನಿಯಮಗಳ ಸಮುದಾಯದಲ್ಲಿ [2][ಅಥವಾ ಯಾವುದೇ ಮುಂಬಯಿ ಅಧಿನಿಯಮ, ಕೊಡಗು ಅಧಿನಿಯಮ, ಹೈದರಾಬಾದ್ ಕಾನೂನು ಅಥವಾ ಮದರಾಸು ಅಧಿನಿಯಮ][2]ದಲ್ಲಿ

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

4. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ

(13) "ತಂದೆ" ಎಂಬುದು ಯಾವ ವ್ಯಕ್ತಿಯ ವೈಯಕ್ತಿಕ ಕಾನೂನು ದತ್ತು ಸ್ವೀಕಾರಕ್ಕೆ ಅನುಮತಿಸುವುದೋ ಆ ಯಾರೇ ವ್ಯಕ್ತಿಯ ಸಂದರ್ಭದಲ್ಲಿ ದತ್ತಕ ತಂದೆಯನ್ನು ಒಳಗೊಳ್ಳತಕ್ಕದ್ದು;

[1][(13ಎ) " ಹಣಕಾಸು ವರ್ಷ" ಅಥವಾ " ಅಧಿಕೃತ ವರ್ಷ" ಎಂಬುದಕ್ಕೆ ಏಪ್ರಿಲ್ ಮೊದಲನೇ ದಿನದಂದು ಪ್ರಾರಂಭವಾಗುವ ವರ್ಷ ಎಂದು ಅರ್ಥವಿರತಕ್ಕದ್ದು:

ಪರಂತು, 1949–50ನೇ ಸಾಲಿನ ಹಣಕಾಸು ಅಥವಾ ಸರ್ಕಾರಿ ವರ್ಷಕ್ಕೆ ಸಂಬಂಧಪಟ್ಟಂತೆ "ಹಣಕಾಸು ವರ್ಷ" ಅಥವಾ " ಅಧಿಕೃತ ವರ್ಷ" ಎಂದರೆ, 1949ರ ಜುಲೈ ಮೊದಲನೇ ದಿನದಂದು ಪ್ರಾರಂಭವಾಗುವ ಮತ್ತು 1950ರ ಮಾರ್ಚ್ ಮೂವತ್ತೊಂದನೇ ದಿನದಂದು ಕೊನೆಗೊಳ್ಳುವ ಅವಧಿ;][1]

1. 1950 ರ ಅಧಿನಿಯಮ ಸಂಖ್ಯೆ Xರ ಮೂಲಕ ಸೇರಿಸಲಾಗಿದೆ

(14) [1][ಕಂದಾಯ ವರ್ಷ][1] ಎಂಬುದಕ್ಕೆ ಜುಲೈ ಮೊದಲನೇ ದಿನದಂದು ಪ್ರಾರಂಭವಾಗುವ ವರ್ಷ ಎಂದು ಅರ್ಥವಿರತಕ್ಕದ್ದು;

2. 1950 ರ ಅಧಿನಿಯಮ ಸಂಖ್ಯೆ Xರ ಮೂಲಕ ರೆವಿನ್ಯೂ ವರ್ಷ " ಎಂಬ ಪದಗಳನ್ನು ಕೆಲವು ಪದಗಳಿಗೆ ಬದಲಾಗಿ ಪ್ರತಿಯೋಜಿಸಲಾಗಿದೆ.

(15) ಒಂದು ಕಾರ್ಯವನ್ನು ನಿಜವಾಗಿಯೂ ಪ್ರಾಮಾಣಿಕವಾಗಿ ಮಾಡಿದ್ದರೆ, ಅದನ್ನು ನಿರ್ಲಕ್ಷ್ಯದಿಂದ ಮಾಡಿರಲಿ ಅಥವಾ ಇಲ್ಲದಿರಲಿ, ಆ ಕಾರ್ಯವನ್ನು " ಸದ್ಭಾವನೆಯಿಂದ" ಮಾಡಲಾಗಿದೆಯೆಂದು ಭಾವಿಸತಕ್ಕದ್ದು;

[1][(16) "ಸರ್ಕಾರ" ಅಥವಾ "ಆ ಸರ್ಕಾರ" ಎಂಬುದಕ್ಕೆ,-

(ಎ) ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಮಾಡಲಾದ ಯಾವುದೇ ಕಾರ್ಯದ ಸಂಬಂಧದಲ್ಲಿ ಮೈಸೂರಿನ ಕಾರ್ಯನಿರ್ವಾಹಕ ಸರ್ಕಾರವನ್ನು ನಡೆಸಲು ಸಂಬಂಧಪಟ್ಟ ದಿನಾಂಕದಲ್ಲಿ ಅಧಿಕಾರ ಪಡೆದಿದ್ದ ಪ್ರಾಧಿಕಾರ ಅಥವಾ ವ್ಯಕ್ತಿ ಎಂಬ ಅರ್ಥವಿರತಕ್ಕದ್ದು;

(ಬಿ) ಸಂವಿಧಾನವು ಪ್ರಾರಂಭವಾದ ತರುವಾಯ ಮಾಡಲಾದ ಅಥವಾ ಮಾಡಬೇಕಾದ ಯಾವುದೇ ಕಾರ್ಯದ ಸಂಬಂಧದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇವೆರಡನ್ನೂ ಒಳಗೊಳ್ಳತಕ್ಕದ್ದು;][1] ಕಾರ್ಯದ ಸಂಬಂಧದಲ್ಲಿ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಇವೆರಡನ್ನೂ

3. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ

[4][(16ಎ) "ಸರ್ಕಾರಿ ಭದ್ರತೆಗಳು" ಎಂಬುದಕ್ಕೆ ಕೇಂದ್ರ ಸರ್ಕಾರದ ಅಥವಾ ಯಾವುದೇ ರಾಜ್ಯ ಸರ್ಕಾರದ ಭದ್ರತೆಗಳು ಎಂದು ಅರ್ಥವಿರತಕ್ಕದ್ದು. ಆದರೆ ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಮಾಡಲಾದ ಯಾವುದೇ ಮೈಸೂರು ಅಧಿನಿಯಮದಲ್ಲಿ ಮೈಸೂರು ರಾಜ್ಯವನ್ನು ಬಿಟ್ಟು ಯಾವುದೇ ರಾಜ್ಯ ಸರ್ಕಾರದ ಭದ್ರತೆಗಳನ್ನು ಇದು ಒಳಗೊಳ್ಳತಕ್ಕದ್ದಲ್ಲ;

(16ಬಿ) "ಉಚ್ಚ ನ್ಯಾಯಾಲಯ" ಎಂಬುದನ್ನು ಸಿವಿಲ್ ವ್ಯವಹರಣೆಗಳಿಗೆ ಸಂಬಂಧಿಸಿದಂತೆ ಅದನ್ನು ಬಳಸಿದಾಗ, [5][ಕರ್ನಾಟಕ ರಾಜ್ಯ][5]ದಲ್ಲಿನ (ಸರ್ವೋಚ್ಚ ನ್ಯಾಯಾಲಯವನ್ನು ಒಳಗೊಳ್ಳದ) ಅತ್ಯುಚ್ಚ ಸಿವಿಲ್ ಅಪೀಲು ನ್ಯಾಯಾಲಯ ಎಂಬ ಅರ್ಥವಿರತಕ್ಕದ್ದು;][4]

4. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.
5. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(17) "ಸ್ಥಿರ ಸ್ವತ್ತು" ಎಂಬುದು ಭೂಮಿ, ಭೂಮಿಯಿಂದ ದೊರಕುವ ಪ್ರಯೋಜನಗಳು, ಮತ್ತು ಭೂಮಿಗೆ ಹೊಂದಿಕೊಂಡಿರುವ ವಸ್ತುಗಳು ಅಥವಾ ಭೂಮಿಗೆ ಹೊಂದಿಕೊಂಡಿರುವ ಯಾವುದೇ ವಸ್ತುವಿನೊಂದಿಗೆ ಖಾಯಂ ಆಗಿ ಸೇರಿಕೊಂಡಿರುವ ವಸ್ತುಗಳು - ಇವುಗಳನ್ನು ಒಳಗೊಳ್ಳತಕ್ಕದ್ದು ;

(18) "ಕಾರಾವಾಸ" ಎಂಬುದಕ್ಕೆ ಭಾರತ ದಂಡ ಸಂಹಿತೆಯಲ್ಲಿ ಪರಿಭಾಷಿಸಿರುವಂತೆ ಎರಡರಲ್ಲೊಂದು ಬಗೆಯ ಕಾರಾವಾಸ ಎಂಬ ಅರ್ಥವಿರತಕ್ಕದ್ದು;

[4][(18ಎ) "ಭಾರತ" ಎಂಬುದಕ್ಕೆ ಈ ಕೆಳಕಂಡ ಅರ್ಥವಿರತಕ್ಕದ್ದು,-

(ಎ) ಭಾರತದ ಆಧಿಪತ್ಯವು ಸ್ಥಾಪನೆಯಾಗುವುದಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ, ಅದು ಹಿಸ್ ಮೆಜೆಸ್ಟಿಯ ಪ್ರಭುತ್ವಕ್ಕೊಳಪಟ್ಟಿದ್ದ ದೇಶೀಯ ಅರಸರುಗಳ ಎಲ್ಲ

ರಾಜ್ಯಕ್ಷೇತ್ರಗಳನ್ನು ಒಳಗೊಂಡ ಬ್ರಿಟೀಷ್ ಭಾರತ, ಅಂಥ ದೇಶೀಯ ಅರಸರ ಪ್ರಭುತ್ವಕ್ಕೊಳಪಟ್ಟ ಎಲ್ಲ ರಾಜ್ಯ ಕ್ಷೇತ್ರಗಳು ಮತ್ತು ಬುಡಕಟ್ಟು ಪ್ರದೇಶಗಳು;

(ಬಿ) ಭಾರತದ ಆಧಿಪತ್ಯವು ಸ್ಥಾಪನೆಯಾದ ತರುವಾಯ ಮತ್ತು ಸಂವಿಧಾನದ ಪ್ರಾರಂಭಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಆ ಆಧಿಪತ್ಯದಲ್ಲಿ ಸೇರಿರುವ ಎಲ್ಲ ರಾಜ್ಯಕ್ಷೇತ್ರಗಳು; ಮತ್ತು

(ಸಿ) ಭಾರತ ಸಂವಿಧಾನವು ಪ್ರಾರಂಭವಾದ ತರುವಾಯದ ಯಾವುದೇ ಅವಧಿಗೆ ಸಂಬಂಧಿಸಿದಂತೆ, ಭಾರತದ ರಾಜ್ಯ ಕ್ಷೇತ್ರದೊಳಗೆ ತತ್ಕಾಲದಲ್ಲಿ ಅಡಕವಾಗಿರುವ ಎಲ್ಲ ರಾಜ್ಯಕ್ಷೇತ್ರಗಳು.][4]

4. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

(19) "ನ್ಯಾಯಿಕ ವ್ಯವಹರಣೆ" ಎಂಬುದಕ್ಕೆ ಸಾಕ್ಷ್ಯವನ್ನು ಕಾನೂನು ಸಮ್ಮತವಾಗಿ ತೆಗೆದುಕೊಳ್ಳಲಾಗಿರುವ ಅಥವಾ ತೆಗೆದುಕೊಳ್ಳಬಹುದಾಗಿರುವ ಯಾವುದೇ ವ್ಯವಹರಣೆ ಎಂಬ ಅರ್ಥವಿರತಕ್ಕದ್ದು;

[1][(19ಎ) " ಕರ್ನಾಟಕ ಅಧಿನಿಯಮ" ಎಂಬುದಕ್ಕೆ 1973ರ ನವೆಂಬರ್ 1 ರ ತರುವಾಯ ಸಂವಿಧಾನದ ಅಡಿಯಲ್ಲಿ ಅಂಗೀಕರಿಸಲಾದ ಕರ್ನಾಟಕ ರಾಜ್ಯ ವಿಧಾನಮಂಡಲದ ಒಂದು ಅಧಿನಿಯಮ ಎಂಬ ಅರ್ಥವಿರತಕ್ಕದ್ದು ಮತ್ತು ಅದು ಈ ಕೆಳಕಂಡವುಗಳನ್ನು ಒಳಗೊಳ್ಳತಕ್ಕದ್ದು,

(i) 1956ರ ನವೆಂಬರ್ 1ರ ತರುವಾಯ ಸಂವಿಧಾನದ ಅಡಿಯಲ್ಲಿ ಅಂಗೀಕರಿಸಲಾದ ಮೈಸೂರು ರಾಜ್ಯ ವಿಧಾನ ಮಂಡಲದ ಒಂದು ಅಧಿನಿಯಮ;

(ii) ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಕರ್ನಾಟಕ ಅಧಿನಿಯಮ III);

(iii) ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ, 1884 (1884ರ ಕರ್ನಾಟಕ ಅಧಿನಿಯಮ 1);

(19ಬಿ) "ಕರ್ನಾಟಕ" ಎಂಬುದಕ್ಕೆ ಕರ್ನಾಟಕ ರಾಜ್ಯದಲ್ಲಿ ತತ್ಕಾಲದಲ್ಲಿ ಅಡಕವಾಗಿರುವ ಎಲ್ಲ ಪ್ರದೇಶಗಳು ಎಂಬ ಅರ್ಥವಿರತಕ್ಕದ್ದು;][1]

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ

(20) "ಸ್ಥಳೀಯ ಪ್ರಾಧಿಕಾರ" ಎಂಬುದಕ್ಕೆ ಪೌರ ಅಥವಾ ಸ್ಥಳೀಯ ನಿಧಿಯ ನಿಯಂತ್ರಣ ಅಥವಾ ನಿರ್ವಹಣೆಗೆ ಕಾನೂನು ಸಮ್ಮತವಾಗಿ ಹಕ್ಕುಳ್ಳ ಅಥವಾ ಸರ್ಕಾರವು ನಿಯಂತ್ರಣ ಅಥವಾ ನಿರ್ವಹಣೆಯನ್ನು ವಹಿಸಿಕೊಟ್ಟ ಒಂದು ಪೌರ ಸಮಿತಿ, ಜಿಲ್ಲಾ ಮಂಡಲಿ, [2][ಬಂದರು ಕಮಿಷನರರ ನಿಕಾಯ][2] ಅಥವಾ ಇತರ ಪ್ರಾಧಿಕಾರ ಎಂಬ ಅರ್ಥವಿರತಕ್ಕದ್ದು;

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ

(21) "ಮ್ಯಾಜಿಸ್ಟ್ರೇಟ್" ಎಂಬುದು ತತ್ಕಾಲದಲ್ಲಿ ಜಾರಿಯಲ್ಲಿರುವ ದಂಡ ಪ್ರಕ್ರಿಯಾ ಸಂಹಿತೆಯ ಅಡಿಯಲ್ಲಿ ಮ್ಯಾಜಿಸ್ಟ್ರೇಟನ ಎಲ್ಲ ಅಧಿಕಾರಗಳನ್ನು ಅಥವಾ ಅವುಗಳ ಪೈಕಿ ಯಾವುದೇ ಅಧಿಕಾರವನ್ನು ಚಲಾಯಿಸುವ ಪ್ರತಿಯೊಬ್ಬ ವ್ಯಕ್ತಿಯನ್ನು ಒಳಗೊಳ್ಳತಕ್ಕದ್ದು;

(22) "ತಿಂಗಳು" ಎಂಬುದಕ್ಕೆ ಬ್ರಿಟಿಷ್ ಕ್ಯಾಲೆಂಡರಿಗೆ ಅನುಸಾರವಾಗಿ ಲೆಕ್ಕ ಹಾಕಲಾದ ತಿಂಗಳು ಎಂಬ ಅರ್ಥವಿರತಕ್ಕದ್ದು;

(23) "ಚರ ಸ್ವತ್ತು" ಎಂಬುದಕ್ಕೆ ಸ್ಥಿರಸ್ವತ್ತನ್ನು ಬಿಟ್ಟು ಐಳಿದ ಎಲ್ಲ ಬಗೆಯ ಸ್ವತ್ತು ಎಂಬ ಅರ್ಥವಿರತಕ್ಕದ್ದು;

(24) "ಮೈಸೂರು" ಎಂಬುದಕ್ಕೆ [3][[1][1973ರ ನವೆಂಬರ್ 1ನೇ ದಿನಕ್ಕೆ ಮುಂಚೆ ಮೈಸೂರು ರಾಜ್ಯ][1]ದಲ್ಲಿ ತತ್ಕಾಲದಲ್ಲಿ ಒಳಗೊಂಡಿರುವ [2][ಎಲ್ಲ ರಾಜ್ಯಕ್ಷೇತ್ರಗಳು][2]][3] ಎಂಬ ಅರ್ಥವಿರತಕ್ಕದ್ದು;

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

3. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ.

[2][(24ಎ) " ಮೈಸೂರು ಅಧಿನಿಯಮ" ಎಂಬುದಕ್ಕೆ [XXX],-

(ಎ) ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮ, 1956ರ ಪ್ರಾರಂಭಕ್ಕೆ ಮುಂಚೆ ಸಂವಿಧಾನದ ಅಡಿಯಲ್ಲಿ ಅಂಗೀಕರಿಸಲಾದ ಮೈಸೂರು ರಾಜ್ಯ ವಿಧಾನಮಂಡಲದ ಅಧಿನಿಯಮ;

(ಬಿ) ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಅಂಗೀಕರಿಸಲಾದ ಮೈಸೂರು ರಾಜ್ಯ ವಿಧಾನಮಂಡಲದ ಒಂದು ಅಧಿನಿಯಮ; ಮತ್ತು

(ಸಿ) ಮೈಸೂರು ಮಹಾರಾಜರು ಸಂವಿಧಾನದ ಪ್ರಾರಂಭಕ್ಕೆ ಮುಂಚೆ ಮಾಡಿದ ಒಂದು ಅಧಿನಿಯಮ, [1][ಆದರೆ ಅದರಲ್ಲಿ ಕರ್ನಾಟಕ ಸಾಮಾನ್ಯ ಖಂಡಗಳ ಅಧಿನಿಯಮ, 1899 (1899ರ ಕರ್ನಾಟಕ ಅಧಿನಿಯಮ III) ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯ ಅಧಿನಿಯಮ, 1884 (1884ರ ಕರ್ನಾಟಕ ಅಧಿನಿಯಮ I) ಇವು ಒಳಗೊಳ್ಳುವುದಿಲ್ಲ;][1]][2]

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ

[4][(24ಬಿ) "ಅಧಿಸೂಚನೆ" ಎಂದರೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾದ ಒಂದು ಅಧಿಸೂಚನೆ;][4]

4. 1985ರ ಅಧಿನಿಯಮ ಸಂಖ್ಯೆ 9ರ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ

(25) "ಪ್ರಮಾಣ ವಚನ" ಎಂಬುದು ಪ್ರಮಾಣ ಮಾಡುವ ಬದಲಾಗಿ ಪ್ರತಿಜ್ಞಾವಚನ ಮಾಡಲು ಅಥವಾ ಘೋಷಣೆ ಮಾಡಲು ಕಾನೂನು ಅನುಮತಿ ಕೊಟ್ಟಿರುವ ವ್ಯಕ್ತಿಗಳ ಸಂದರ್ಭದಲ್ಲಿ, ಪ್ರತಿಜ್ಞಾವಚನ ಮತ್ತು ಘೋಷಣೆಯನ್ನು ಒಳಗೊಳ್ಳತಕ್ಕದ್ದು;

(26) "ಅಪರಾಧ" ಎಂಬುದಕ್ಕೆ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ದಂಡನೀಯವಾದ ಯಾವುದೇ ಕೃತ್ಯ ಅಥವಾ ಲೋಪ ಎಂಬ ಅರ್ಥವಿರತಕ್ಕದ್ದು;

[1][(26ಎ) "ಸರ್ಕಾರಿ ರಾಜಪತ್ರ" ಅಥವಾ " ರಾಜಪತ್ರ" ಎಂಬುದಕ್ಕೆ [2][ಕರ್ನಾಟಕ ರಾಜಪತ್ರ][2] ಎಂಬ ಅರ್ಥವಿರತಕ್ಕದ್ದು;][1]

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ.

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(27) "ಭಾಗ" ಎಂಬುದಕ್ಕೆ, ಆ ಪದವು ಯಾವ ಅಧಿನಿಯಮದಲ್ಲಿ ಬರುವುದೋ ಆ ಅಧಿನಿಯಮದ ಒಂದು ಭಾಗ ಎಂದು ಅರ್ಥವಿರತಕ್ಕದ್ದು;

[1][(27ಎ) " ಎ ಭಾಗದ ರಾಜ್ಯ" ಎಂಬುದಕ್ಕೆ [2][ಸಂವಿಧಾನದ (ಏಳನೇ ತಿದ್ದುಪಡಿ) ಅಧಿನಿಯಮ, 1956ಕ್ಕೆ ಮುಂಚೆ ಜಾರಿಯಲ್ಲಿದ್ದಂತೆ][2] ಸಂವಿಧಾನದ ಮೊದಲನೇ ಅನುಸೂಚಿಯ 'ಎ' ಭಾಗದಲ್ಲಿ ತತ್ಕಾಲಕ್ಕೆ ನಿರ್ದಿಷ್ಟಪಡಿಸಿದ ರಾಜ್ಯ ಎಂದು ಅರ್ಥವಿರತಕ್ಕದ್ದು. "ಬಿ ಭಾಗದ ರಾಜ್ಯ" ಎಂಬುದಕ್ಕೆ ಆ ಅನುಸೂಚಿಯ 'ಬಿ' ಭಾಗದಲ್ಲಿ ತತ್ಕಾಲಕ್ಕೆ ನಿರ್ದಿಷ್ಟಪಡಿಸಿದ ರಾಜ್ಯ ಎಂದು ಅರ್ಥವಿರತಕ್ಕದ್ದು, ಮತ್ತು "ಸಿ ಭಾಗದ ರಾಜ್ಯ" ಎಂಬುದಕ್ಕೆ ಆ ಅನುಸೂಚಿಯ ' ಸಿ' ಭಾಗದಲ್ಲಿ ತತ್ಕಾಲಕ್ಕೆ ನಿರ್ದಿಷ್ಟಪಡಿಸಿದ ರಾಜ್ಯ ಅಥವಾ ಸಂವಿಧಾನದ 243 ನೇ ಅನುಚ್ಛೇದದ ಉಪಬಂಧಗಳ ಮೇರೆಗೆ ರಾಷ್ಟ್ರಪತಿಯು ತತ್ಕಾಲದಲ್ಲಿ ಆಡಳಿತವನ್ನು ನಿರ್ವಹಿಸುತ್ತಿದ್ದ ರಾಜ್ಯಕ್ಷೇತ್ರ ಎಂದು ಅರ್ಥವಿರತಕ್ಕದ್ದು;][1]

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(28) " ವ್ಯಕ್ತಿ " ಎಂಬುದು ಅದು ನಿಗಮಿತವಾಗಿ ಅಥವಾ ನಿಗಮಿತವಾಗಿಲ್ಲದ ಯಾವುದೇ ಕಂಪನಿಯನ್ನು ಅಥವಾ ಸಂಸ್ಥೆಯನ್ನು ಅಥವಾ ವ್ಯಕ್ತಿಗಳ ನಿಕಾಯವನ್ನು ಒಳಗೊಳ್ಳತಕ್ಕದ್ದು ;

(29) "ಸ್ಥಳ" ಎಂಬುದು ಮನೆ, ಕಟ್ಟಡ, ಡೇರೆ ಮತ್ತು ನೌಕೆಯನ್ನು ಸಹ ಒಳಗೊಳ್ಳತಕ್ಕದು;

[3][(29ಎ) "ನಿಯಮಿಸಲಾದುದು" ಎಂದರೆ ಈ ಪದವು ಬರುವಂಥ ಅಧಿನಿಯಮದ ಅಡಿಯಲ್ಲಿ ರಚಿಸಲಾದ ನಿಯಮಗಳ ಮೂಲಕ ನಿಯಮಿಸಲಾದುದು;][3]

3. 1985ರ ಅಧಿನಿಯಮ ಸಂಖ್ಯೆ 9ರ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

(30) "ಸಾರ್ವಜನಿಕರು" ಎಂಬುದು ಸಾರ್ವಜನಿಕರ ಯಾವುದೇ ವರ್ಗ ಅಥವಾ ಯಾವುದೇ ಸಮುದಾಯವನ್ನು ಒಳಗೊಳ್ಳತಕ್ಕದ್ದು;

(31) "ಸಾರ್ವಜನಿಕ ಉಪದ್ರವ" ಎಂಬುದಕ್ಕೆ ಭಾರತ ದಂಡ ಸಂಹಿತೆಯಲ್ಲಿ ಪರಿಭಾಷಿಸಲಾದಂಥ ಸಾರ್ವಜನಿಕ ಉಪದ್ರವ ಎಂದು ಅರ್ಥವಿರತಕ್ಕದ್ದು;

[4][(32) ಒಂದು ದಸ್ತಾವೇಜಿಗೆ ಸಂಬಂಧಿಸಿ ಉಪಯೋಗಿಸಲಾದ "ನೋಂದಾಯಿತವಾದುದು" ಎಂಬುದಕ್ಕೆ,-

(ಎ) 1951ರ ಏಪ್ರಿಲ್ ಒಂದನೇ ದಿನಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ, ದಸ್ತಾವೇಜುಗಳನ್ನು ನೋಂದಾಯಿಸಲು ಮೈಸೂರು ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಕಾನೂನಿನ ಮೇರೆಗೆ ನೋಂದಾಯಿತವಾದುದು ಎಂದು ಅರ್ಥವಿರತಕ್ಕದ್ದು;

(ಬಿ) 1951ರ ಏಪ್ರಿಲ್ ಒಂದನೇ ದಿನದಿಂದೀಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ, ದಸ್ತಾವೇಜುಗಳನ್ನು ನೋಂದಾಯಿಸಲು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ [5][ಭಾರತ][5] ದಲ್ಲಿ ನೋಂದಾಯಿತವಾದುದು ಎಂದು ಅರ್ಥವಿರತಕ್ಕದ್ದು;][4] 1951ರ ಏಪ್ರಿಲ್ ಒಂದನೇ

4. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ.

5. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[3][(32ಎ) "ನಿರಸನ" ಎಂಬುದು ಬಿಟ್ಟುಬಿಡುವುದನ್ನು ಮತ್ತು ಲೋಪಿಸುವುದನ್ನು ಒಳಗೊಳ್ಳತಕ್ಕದ್ದು;][3]

3. 1985ರ ಅಧಿನಿಯಮ ಸಂಖ್ಯೆ 9ರ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಸೇರಿಸಲಾಗಿದೆ.

[6][(33) xxx][6]

3. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ 33ನೇ ಖಂಡವನ್ನು ಬಿಟ್ಟುಬಿಡಲಾಗಿದೆ.

(34) "ನಿಯಮ" ಎಂಬುದಕ್ಕೆ ಯಾವುದೇ ಅಧಿನಿಯಮಿತಿಯ ಮೂಲಕ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ರಚಿಸಿದ ನಿಯಮ ಎಂದು ಅರ್ಥವಿರತಕ್ಕದ್ದು [7][ಮತ್ತು ಇದು ಯಾವುದೇ ಅಧಿನಿಯಮಿತಿಯ ಮೇರೆಗೆ ನಿಯಮವಾಗಿ ರಚಿಸಲಾದ ವಿನಿಯಮವನ್ನು ಒಳಗೊಳ್ಳತಕ್ಕದ್ದು;][7]

7. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರ್ಪಡೆ ಮಾಡಲಾಗಿದೆ.

(35) "ಅನುಸೂಚಿ" ಎಂಬುದಕ್ಕೆ ಆ ಪದವು ಬರುವ ಅಧಿನಿಯಮದ ಅನುಸೂಚಿ ಎಂದು ಅರ್ಥವಿರತಕ್ಕದ್ದು;

(36) "ಪ್ರಕರಣ" ಎಂಬುದಕ್ಕೆ ಆ ಪದವು ಬರುವ ಅಧಿನಿಯಮದ ಪ್ರಕರಣ ಎಂದು ಅರ್ಥವಿರತಕ್ಕದ್ದು;

(37) "ಸಹಿಮಾಡುವುದು" ಎಂಬುದು ಅದರ ವ್ಯಾಕರಣ ವ್ಯತ್ಯಾಸಗಳೊಡನೆ ಮತ್ತು ಸಜಾತೀಯ ಪದಾವಳಿಯೊಂದಿಗೆ, ತನ್ನ ಹೆಸರನ್ನು ಬರೆಯಲು ಅಸಮರ್ಥನಾಗಿರುವ ವ್ಯಕ್ತಿಗೆ ಸಂಬಂಧಿಸಿದಂತೆ ವ್ಯಾಕರಣ ವ್ಯತ್ಯಾಸಗಳೊಡನೆ ಮತ್ತು ಸಜಾತೀಯ ಪದಾವಳಿಯೊಂದಿಗೆ ಗುರುತು ಎಂಬುದನ್ನು ಒಳಗೊಳ್ಳತಕ್ಕದ್ದು;

(38) "ಮಗ" ಎಂಬುದು ಯಾವ ವ್ಯಕ್ತಿಯ ವೈಯಕ್ತಿಕ ಕಾನೂನು ದತ್ತಕವನ್ನು ಅನುಮತಿಸುವುದೋ ಆ ಯಾವನೇ ವ್ಯಕ್ತಿಯ ಸಂದರ್ಭದಲ್ಲಿ, ದತ್ತು ಮಗನನ್ನು ಒಳಗೊಳ್ಳತಕ್ಕದ್ದು;

[1][[2][(38ಎ) "ರಾಜ್ಯ" ಎಂಬುದಕ್ಕೆ,-

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಎ) ಸಂವಿಧಾನ (ಏಳನೆಯ ತಿದ್ದುಪಡಿ) ಅಧಿನಿಯಮ, 1956ರ ಪ್ರಾರಂಭಕ್ಕೆ ಮುಂಚಿನ ಯಾವುದೇ ಅವಧಿಗೆ ಸಂಬಂಧಿಸಿದಂತೆ ಎ ಭಾಗದ ರಾಜ್ಯ, ಬಿ ಭಾಗದ ರಾಜ್ಯ ಅಥವಾ ಸಿ ಭಾಗದ ರಾಜ್ಯ ಎಂದು ಅರ್ಥವಿರತಕ್ಕದ್ದು ; ಮತ್ತು

(ಬಿ) ಅಂಥ ಪ್ರಾರಂಭದ ತರುವಾಯದ ಯಾವುದೇ ಅವಧಿಗೆ ಸಂಬಂಧಿಸಿದಂತೆ, ಸಂವಿಧಾನದ ಒಂದನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ರಾಜ್ಯ ಎಂದು ಅರ್ಥವಿರತಕ್ಕದ್ದು ಮತ್ತು ಅದು ಒಂದು ಒಕ್ಕೂಟ ರಾಜ್ಯಕ್ಷೇತ್ರವನ್ನು ಒಳಗೊಳ್ಳತಕ್ಕದ್ದು;][2]

(38ಬಿ) " ರಾಜ್ಯ ಅಧಿನಿಯಮ " ಎಂಬುದಕ್ಕೆ ಸಂವಿಧಾನದ ಮೂಲಕ ಸ್ಥಾಪಿತವಾದ ಅಥವಾ ಮುಂದುವರೆದ ರಾಜ್ಯ ವಿಧಾನಮಂಡಲವು ರಚಿಸಿದ ಅಧಿನಿಯಮ ಎಂದು ಅರ್ಥವಿರತಕ್ಕದ್ದು;

[2][(38ಸಿ) " ರಾಜ್ಯ ಸರ್ಕಾರ" ಎಂಬುದಕ್ಕೆ,-

(ಎ) ಸಂವಿಧಾನವು ಪ್ರಾರಂಭವಾದ ತರುವಾಯ ಮತ್ತು ಸಂವಿಧಾನದ (ಏಳನೇ ತಿದ್ದುಪಡಿ) ಅಧಿನಿಯಮ, 1956ರ ಪ್ರಾರಂಭಕ್ಕೆ ಮುಂಚೆ ಮಾಡಲಾದ ಯಾವುದೇ ಕೃತ್ಯಕ್ಕೆ ಸಂಬಂಧಿಸಿದಂತೆ ಮೈಸೂರು ರಾಜ್ಯದ ರಾಜ ಪ್ರಮುಖ ಎಂದು ಅರ್ಥವಿರತಕ್ಕದ್ದು; ಮತ್ತು

(ಬಿ) ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮ, 1956ರ ಪ್ರಾರಂಭದ ತರುವಾಯ [3][ಮತ್ತು 1973ರ ನವೆಂಬರ್ 1ಕ್ಕೆ ಮುಂಚೆ][3] [xxx] ಮಾಡಲಾದ ಯಾವುದೇ ಕೃತ್ಯಕ್ಕೆ ಸಂಬಂಧಿಸಿದಂತೆ ಮೈಸೂರು ರಾಜ್ಯದ ರಾಜ್ಯಪಾಲ ಎಂದು ಅರ್ಥವಿರತಕ್ಕದ್ದು;][2]

[3][(ಸಿ) 1973ರ ನವೆಂಬರ್ 1ರ ತರುವಾಯ ಮಾಡಲಾದ ಅಥವಾ ಮಾಡಬೇಕಾದ ಯಾವುದೇ ಕೃತ್ಯದ ಸಂಬಂಧದಲ್ಲಿ ಕರ್ನಾಟಕ ರಾಜ್ಯದ ರಾಜ್ಯಪಾಲ ಎಂದು ಅರ್ಥವಿರತಕ್ಕದ್ದು;][3]][1]

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(39) "ಉಪ ಪ್ರಕರಣ" ಎಂಬುದಕ್ಕೆ ಆ ಪದವು ಬರುವ ಪ್ರಕರಣದ ಉಪ ಪ್ರಕರಣ ಎಂದು ಅರ್ಥವಿರತಕ್ಕದ್ದು;

(40) "ಪ್ರಮಾಣ ಮಾಡು" ಎಂಬುದು, ಅದರ ವ್ಯಾಕರಣ ವ್ಯತ್ಯಾಸ ಮತ್ತು ಸಜಾತೀಯ ಪದಾವಳಿಯೊಂದಿಗೆ, ಪ್ರಮಾಣ ಮಾಡುವ ಬದಲಾಗಿ ಪ್ರತಿಜ್ಞೆ ಮಾಡಲು ಅಥವಾ ಘೋಷಿಸಲು ಕಾನೂನು ಅನುಮತಿ ಕೊಟ್ಟಿರುವ ವ್ಯಕ್ತಿಗಳ ಸಂದರ್ಭದಲ್ಲಿ, ಪ್ರತಿಜ್ಞಾ ವಚನ ಮತ್ತು ಘೋಷಣೆಯನ್ನು ಒಳಗೊಳ್ಳತಕ್ಕದ್ದು;

[2][(40ಎ) "ಒಕ್ಕೂಟ ರಾಜ್ಯಕ್ಷೇತ್ರ" ಎಂಬುದಕ್ಕೆ ಸಂವಿಧಾನದ ಒಂದನೇ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಒಕ್ಕೂಟ ರಾಜ್ಯಕ್ಷೇತ್ರ ಎಂದು ಅರ್ಥವಿರತಕ್ಕದ್ದು ಮತ್ತು ಅದು ಭಾರತದ ರಾಜ್ಯಕ್ಷೇತ್ರದೊಳಗೆ ಸೇರಿದ ಅದರೆ ಆ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿಲ್ಲದ ಯಾವುದೇ ಇತರ ರಾಜ್ಯಕ್ಷೇತ್ರವನ್ನು ಒಳಗೊಳ್ಳತಕ್ಕದ್ದು;

(40ಬಿ) "ನೌಕೆ" ಎಂಬುದು ಯಾವುದೇ ಹಡಗು ಅಥವಾ ದೋಣಿ ಅಥವಾ ನೌಕಾ ಸಂಚಾರದಲ್ಲಿ ಉಪಯೋಗಿಸುವ ಯಾವುದೇ ಇತರ ಬಗೆಯ ನೌಕೆಯನ್ನು ಒಳಗೊಳತಕ್ಕದ್ದು;][2]

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(41) " ಮರಣ ಶಾಸನ" ಎಂಬುದು ಮರಣ ಶಾಸನದ ಅನುಬಂಧವನ್ನು ಮತ್ತು ಮರಣಾ ನಂತರ ಸ್ವತ್ತಿನ ವಿಲೆಗೆ ಸಂಬಂಧಿಸಿದ ಪ್ರತಿಯೊಂದು ಸ್ವಪ್ರೇರಣೆ ಬರಹವನ್ನು ಒಳಗೊಳ್ಳತಕ್ಕದ್ದು ;

(42) "ಬರಹ"ಕ್ಕೆ ಸಂಬಂಧಿಸಿದ ಪದಾವಳಿಗಳನ್ನು ಅವು ಮುದ್ರಣ, ಕಲ್ಲಚ್ಚು, ಛಾಯಾಚಿತ್ರ ಮತ್ತು ದೃಶ್ಯ ರೂಪದಲ್ಲಿ ಪದಗಳನ್ನು ನಿರೂಪಿಸುವ ಅಥವಾ ತದ್ವತ್ತಾಗಿ ಮೂಡಿಸುವ ಇತರ ವಿಧಗಳೆಂದು ಅರ್ಥೈಸತಕ್ಕದ್ದು;

(43) "ವರ್ಷ" ಎಂಬುದಕ್ಕೆ ಬ್ರಿಟಿಷ್ ಕ್ಯಾಲೆಂಡರಿಗನುಸಾರವಾಗಿ ಲೆಕ್ಕ ಹಾಕಲಾಗುವ ವರ್ಷವೆಂದು ಅರ್ಥವಿರತಕ್ಕದ್ದು;

[2][(44) [3]["ಬೆಳಗಾವಿ ಪ್ರದೇಶ"]][3] ಎಂದರೆ ರಾಜ್ಯಗಳ ಪುನರ್ವಿಂಗಡಣೆ ಅಧಿನಿಯಮ, 1956 (1956ರ ಕೇಂದ್ರಾಧಿನಿಯಮ 37) ರ 7ನೇ ಪ್ರಕರಣದ (1)ನೇ ಉಪ ಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಪ್ರದೇಶ;

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

3. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(45) "ಕೊಡಗು ಜಿಲ್ಲೆ" ಎಂದರೆ ರಾಜ್ಯಗಳ ಪುನರ್ವಿಂಗಡಣೆ ಅಧಿನಿಯಮ, 1956 (1956ರ ಕೇಂದ್ರಾಧಿನಿಯಮ 37)ರ 7ನೇ ಪ್ರಕರಣದ (2)ನೇ ಉಪ ಪ್ರಕರಣದಲ್ಲಿ ಹಾಗೆಂದು ಘೋಷಿತವಾಗಿರುವ ಪ್ರದೇಶ;

(46) [1]["ಗುಲ್ಬರ್ಗಾ ಪ್ರದೇಶ"][1] ಎಂದರೆ ರಾಜ್ಯಗಳ ಪುನರ್ವಿಂಗಡಣೆ ಅಧಿನಿಯಮ, 1956 (1956ರ ಕೇಂದ್ರಾಧಿನಿಯಮ 37) ರ 7ನೇ ಪ್ರಕರಣದ (1)ನೇ ಉಪಪ್ರಕರಣದ (ಸಿ) ಖಂಡದಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರದೇಶ;

(47) [1]["ಮಂಗಳೂರು ಮತ್ತು ಕೊಳ್ಳೇಗಾಲ ಪ್ರದೇಶ"][1] ಎಂದರೆ ರಾಜ್ಯಗಳ ಪುನರ್ವಿಂಗಡಣೆ ಅಧಿನಿಯಮ, 1956 (1956ರ ಕೇಂದ್ರಾಧಿನಿಯಮ 37) ರ 7ನೇ ಪ್ರಕರಣದ (1)ನೇ ಉಪ ಪ್ರಕರಣದ (ಡಿ) ಖಂಡದಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರದೇಶ;

(48) "ಮೈಸೂರು ಪ್ರದೇಶ" ಎಂದರೆ ರಾಜ್ಯಗಳ ಪುನರ್ವಿಂಗಡಣೆ ಅಧಿನಿಯಮ, 1956ರ (1956ರ ಕೇಂದ್ರಾಧಿನಿಯಮ 37) 7 ನೇ ಪ್ರಕರಣದ (1) ನೇ ಉಪ ಪ್ರಕರಣದ (ಎ) ಖಂಡದಲ್ಲಿ ನಿರ್ದಿಷ್ಟಪಡಿಸಲಾಗಿರುವ ಪ್ರದೇಶ.][1]

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**4. ಹಿಂದಿನ ಅಧಿನಿಯಮಿತಿಗಳಿಗೆ ಮೇಲೆ ಹೇಳಿದ ಪರಿಭಾಷೆಗಳ ಅನ್ವಯ.–** ಈ ಕೆಳಕಂಡ ಪದಗಳಿಗೆ ಮತ್ತು ಅಭಿವ್ಯಕ್ತಿಗಳಿಗೆ ಎಂದರೆ, "ಶಪಥ ಪತ್ರ", "ಬ್ಯಾರಿಸ್ಟರ್", "ಬ್ರಿಟಿಷ್ ಭಾರತ", [2]["ಉಚ್ಚ ನ್ಯಾಯಾಲಯ"][2], "ಜಿಲ್ಲಾ ನ್ಯಾಯಾಧೀಶ", "ತಂದೆ", "ಸ್ಥಿರ ಸ್ವತ್ತು", "ಕಾರಾವಾಸ", "ಮ್ಯಾಜಿಸ್ಟ್ರೇಟ್", "ತಿಂಗಳು", "ಚರ ಸ್ವತ್ತು", "ಪ್ರಮಾಣ ವಚನ", "ವ್ಯಕ್ತಿ", " ಪ್ರಕರಣ", "ಮಗ", "ಪ್ರಮಾಣ ಮಾಡು", "ಮರಣ ಶಾಸನ" ಮತ್ತು "ವರ್ಷ" ಇವುಗಳಿಗೆ 3ನೇ ಪ್ರಕರಣದಲ್ಲಿರುವ ಪರಿಭಾಷೆಗಳು, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು, 1868ರ ಜನವರಿ ಮೂರನೇ ದಿನಾಂಕದ ತರುವಾಯ ಮಾಡಲಾದ ಎಲ್ಲ ಅಧಿನಿಯಮಿತಿಗಳಿಗೆ ಅನ್ವಯವಾಗತಕ್ಕದ್ದು. ಇದ್ದ ಹೊರತು, 1868ರ ಜನವರಿ ಮೂರನೇ ದಿನಾಂಕದ ತರುವಾಯ

2. 1930ರ ಅಧಿನಿಯಮ ಸಂಖ್ಯೆ XII ರ ಮೂಲಕ "ಮುಖ್ಯ ನ್ಯಾಯಾಲಯ" ಎಂಬ ಪದಕ್ಕೆ ಬದಲಾಗಿ "ಉಚ್ಚ ನ್ಯಾಯಾಲಯ" ಎಂಬ ಪದವನ್ನು ಪ್ರತಿಯೋಜಿಸಲಾಗಿದೆ.

[3][**4ಎ. ಕೆಲವು ಅಧಿನಿಯಮಿತಿಗಳಿಗೆ ಬರುವ 'ರಾಜ್ಯ' ಮತ್ತು ' ಮೈಸೂರು ರಾಜ್ಯ' ಎಂಬ ಪದಾವಳಿಗಳ ಪರಿಭಾಷೆ.–** 1956ರ ನವೆಂಬರ್ ಮೊದಲನೇ ದಿನದಿಂದ [1][ಮತ್ತು 1973ರ ನವೆಂಬರ್ 1ನೇ ದಿನದವರೆಗೆ][1], 3ನೇ ಪ್ರಕರಣದ (12)ನೇ ಖಂಡದಲ್ಲಿ ಪರಿಭಾಷಿಸಲಾದ ಪ್ರತಿಯೊಂದು ಅಧಿನಿಯಮಿತಿಯಲ್ಲಿ ಬರುವ 'ರಾಜ್ಯ' ಮತ್ತು ' ಮೈಸೂರು ರಾಜ್ಯ' ಎಂಬ ಪದಾವಳಿಗಳಿಗೆ (ಆ ಪದಾವಳಿಗಳಿಗೆ ರಾಜ್ಯಕ್ಷೇತ್ರ ಅಥವಾ ಪ್ರದೇಶವನ್ನು ಐಲ್ಲೇಖಿಸುವಲ್ಲಿ) ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ತತ್ಕಾಲದಲ್ಲಿ ಮೈಸೂರು ರಾಜ್ಯದಲ್ಲಿ ಒಳಗೊಂಡಿರುವ ಎಲ್ಲ ರಾಜ್ಯಕ್ಷೇತ್ರಗಳೆಂಬ ಅರ್ಥವಿರತಕ್ಕದ್ದು.][3] ಸಂದರ್ಭವು ಅನ್ಯಥಾ ಅಗತ್ಯಪಡಿಸಿದ

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][4ಬಿ. **ಕೆಲವು ಅಧಿನಿಯಮಿತಿಗಳಲ್ಲಿ ಬರುವ 'ರಾಜ್ಯ' ಮತ್ತು 'ಕರ್ನಾಟಕ ರಾಜ್ಯ' ಎಂಬ ಪದಾವಳಿಗಳ ಪರಿಭಾಷೆ.–** 1973ರ ನವೆಂಬರ್ ಮೊದಲನೇ ದಿನದಿಂದ ಜಾರಿಗೆ ಬರುವಂತೆ, 3ನೇ ಪ್ರಕರಣದ (12)ನೇ ಖಂಡದಲ್ಲಿ ಪರಿಭಾಷಿಸಲಾದಂಥ ಪ್ರತಿಯೊಂದು ಅಧಿನಿಯಮಿತಿಯಲ್ಲಿನ 'ರಾಜ್ಯ' ಮತ್ತು 'ಕರ್ನಾಟಕ ರಾಜ್ಯ' ಎಂಬ ಪದಾವಳಿಗಳು ರಾಜ್ಯಕ್ಷೇತ್ರ ಅಥವಾ ಪ್ರದೇಶಕ್ಕೆ ಉಲ್ಲೇಖಿಸುವಲ್ಲಿ, ಅವುಗಳಿಗೆ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಕರ್ನಾಟಕ ರಾಜ್ಯದಲ್ಲಿ ತತ್ಕಾಲದಲ್ಲಿ ಇರುವ ಎಲ್ಲ ರಾಜ್ಯಕ್ಷೇತ್ರಗಳೆಂಬ ಅರ್ಥವಿರತಕ್ಕದ್ದು.][1]

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

## ಅರ್ಥಾನ್ವಯದ ಸಾಮಾನ್ಯ ನಿಯಮಗಳು

**5. ಅಧಿನಿಯಮಿತಿಯು ಜಾರಿಗೆ ಬರುವುದು.–** [4][(1) [1][ಯಾವುದೇ ಮೈಸೂರು ಅಧಿನಿಯಮವು ಅಥವಾ ಕರ್ನಾಟಕ ಅಧಿನಿಯಮವು][1] ಒಂದು ನಿರ್ದಿಷ್ಟ ದಿನದಂದು ಜಾರಿಗೆ ಬರುವುದೆಂದು ಹೇಳಿರದಿದ್ದರೆ, ಅದು,-

(i) ಸಂವಿಧಾನವು ಪ್ರಾರಂಭವಾಗುವುದಕ್ಕೆ ಮುಂಚೆ ರಚಿಸಲಾದ ಮೈಸೂರು ಅಧಿನಿಯಮಗಳ ಸಂದರ್ಭದಲ್ಲಿ, ಮಹಾರಾಜರ ಸಮ್ಮತಿಯನ್ನು ಪಡೆದ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು;

(ii) ಸಂವಿಧಾನವು ಪ್ರಾರಂಭವಾದ ತರುವಾಯ ಮತ್ತು ಮೈಸೂರು ಸಾಮಾನ್ಯ ಖಂಡಗಳ (ತಿದ್ದುಪಡಿ) ಅಧಿನಿಯಮ, 1953 ಪ್ರಾರಂಭವಾಗುವುದಕ್ಕೆ ಮುಂಚೆ ರಚಿಸಲಾದ ಮೈಸೂರು ಅಧಿನಿಯಮದ ಸಂದರ್ಭದಲ್ಲಿ, ರಾಜಪ್ರಮುಖನ ಅಥವಾ ಸಂದರ್ಭವು ಅಗತ್ಯಪಡಿಸಬಹುದಾದಂತೆ ರಾಷ್ಟ್ರಪತಿಯ ಸಮ್ಮತಿ ಪಡೆದ ದಿನದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು ;

(iii) ಮೈಸೂರು ಸಾಮಾನ್ಯ ಖಂಡಗಳ(ತಿದ್ದುಪಡಿ) ಅಧಿನಿಯಮ, 1953 ಪ್ರಾರಂಭವಾದ ತರುವಾಯ [3][ಮತ್ತು ಸಂವಿಧಾನ (ಏಳನೇ ತಿದ್ದುಪಡಿ) ಅಧಿನಿಯಮ, 1956 ಪ್ರಾರಂಭವಾಗುವುದಕ್ಕೆ ಮುಂಚೆ][3] ರಚಿಸಲಾದ ಮೈಸೂರು ಅಧಿನಿಯಮದ ಸಂದರ್ಭದಲ್ಲಿ, ಅದಕ್ಕೆ ರಾಜಪ್ರಮುಖನ ಅಥವಾ ಸಂದರ್ಭವು ಅಗತ್ಯಪಡಿಸಬಹುದಾದಂತೆ ರಾಷ್ಟ್ರಪತಿಯ ಸಮ್ಮತಿಯನ್ನು ಪಡೆದು ರಾಜಪತ್ರದಲ್ಲಿ ಮೊದಲು ಪ್ರಕಟವಾದ ದಿನಾಂಕದಂದು [1][ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು;]][1][4]

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ.

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
3. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

[1][(iv) [2][ಕರ್ನಾಟಕ ಅಧಿನಿಯಮದ ಸಂದರ್ಭದಲ್ಲಿ][2] ಅದಕ್ಕೆ ರಾಜ್ಯಪಾಲನ ಅಥವಾ ಸಂದರ್ಭವು ಅಗತ್ಯಪಡಿಸಬಹುದಾದಂತೆ ರಾಷ್ಟ್ರಪತಿಯ ಸಮ್ಮತಿಯನ್ನು ಪಡೆದು ರಾಜಪತ್ರದಲ್ಲಿ ಮೊದಲು ಪ್ರಕಟವಾದ ದಿನಾಂಕದಂದು ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.][1] ಅಗತ್ಯಪಡಿಸಬಹುದಾದಂತೆ ರಾಷ್ಟ್ರಪತಿಯ

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ತದ್ವಿರುದ್ಧವಾದುದನ್ನು ವ್ಯಕ್ತಪಡಿಸಿದ ಹೊರತು, ಅಧಿನಿಯಮವು ಪ್ರಾರಂಭವಾಗುವ ದಿನದ ಹಿಂದಿನ ದಿನವು ಮುಗಿದ ಕೂಡಲೇ ಜಾರಿಗೆ ಬರುವುದೆಂದು ಅರ್ಥೈಸತಕ್ಕದ್ದು.

[3][(3) (1)ನೇ ಉಪ ಪ್ರಕರಣದ (iii)ನೇ ಖಂಡದಲ್ಲಿ [1][ಅಥವಾ (iv)ನೇ ಖಂಡ][1] ದಲ್ಲಿ ಉಲ್ಲೇಖಿಸಲಾದ ಪ್ರತಿಯೊಂದು ಅಧಿನಿಯಮದಲ್ಲಿ, ರಾಜಪತ್ರದಲ್ಲಿ ಅದನ್ನು ಪ್ರಕಟಿಸಿದ ದಿನಾಂಕವನ್ನು, ಅಧಿನಿಯಮದ ಶೀರ್ಷಿಕೆಯ ಮೇಲಾಗಲೀ ಅಥವಾ ಕೆಳಗಾಗಲೀ ಮುದ್ರಿಸತಕ್ಕದ್ದು ಮತ್ತು ಅದು, ಆ ಅಧಿನಿಯಮದ ಒಂದು ಭಾಗವಾಗಿರತಕ್ಕದ್ದು.][3]

1. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

3. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರ್ಪಡೆ ಮಾಡಲಾಗಿದೆ.

**6. ನಿರಸನದ ಪರಿಣಾಮ.–** ಈ ಅಧಿನಿಯಮವು ಪ್ರಾರಂಭವಾದ ತರುವಾಯ ಈ ಅಧಿನಿಯಮ ಅಥವಾ [2][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][2] ವು ಇಲ್ಲಿಯವರೆಗೆ ಮಾಡಲಾದ ಅಥವಾ ಇನ್ನು ಮುಂದೆ ಮಾಡಲಾಗುವ ಯಾವುದೇ ಅಧಿನಿಯಮಿತಿಯನ್ನು ನಿರಸನಗೊಳಿಸಿದಲ್ಲಿ, ಬೇರೆ ಉದ್ದೇಶವು ಕಂಡು ಬಂದ ಹೊರತು, ಆ ನಿರಸನವು,-

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(ಎ) ನಿರಸನವು ಪರಿಣಾಮಕಾರಿಯಾಗುವ ಕಾಲದಲ್ಲಿ ಜಾರಿಯಲ್ಲಿರದ ಅಥವಾ ಅಸ್ತಿತ್ವದಲ್ಲಿರದ ಯಾವುದನ್ನೂ ಪುನರುಜ್ಜೀವನಗೊಳಿಸತಕ್ಕದ್ದಲ್ಲ; ಅಥವಾ

(ಬಿ) ಹಾಗೆ ನಿರಸನಗೊಂಡ ಯಾವುದೇ ಅಧಿನಿಯಮಿತಿಯ ಅಥವಾ ಅದರ ಮೇರೆಗೆ ಕ್ರಮಬದ್ಧವಾಗಿ ಮಾಡಲಾದ ಅಥವಾ ಮಾಡಲೆಡೆಗೊಟ್ಟ ಯಾವುದೇ ಕಾರ್ಯದ ಪೂರ್ವಜಾರಿಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಸಿ) ಹಾಗೆ ನಿರಸಿತವಾದ ಯಾವುದೇ ಅಧಿನಿಯಮಿತಿಯ ಮೇರೆಗೆ ಆರ್ಜಿಸಲಾದ, ಪ್ರಾಪ್ತವಾದ ಅಥವಾ ವಹಿಸಲಾದ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಡಿ) ಹಾಗೆ ನಿರಸನವಾದ ಯಾವುವೇ ಅಧಿನಿಯಮಿತಿಗಳ ವಿರುದ್ಧ ಮಾಡಲಾದ ಯಾವುದೇ ಅಪರಾಧಕ್ಕೆ ಸಂಬಂಧಿಸಿದಂತೆ, ಗುರಿಯಾದ ಯಾವುದೇ ದಂಡ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ಬಾಧಿಸತಕ್ಕದ್ದಲ್ಲ; ಅಥವಾ

(ಇ) ಮೇಲೆ ಹೇಳಿದಂಥ ಯಾವುದೇ ಹಕ್ಕು, ವಿಶೇಷಾಧಿಕಾರ, ಬಾಧ್ಯತೆ, ಹೊಣೆಗಾರಿಕೆ, ದಂಡ, ಮುಟ್ಟುಗೋಲು ಅಥವಾ ಶಿಕ್ಷೆಗೆ ಸಂಬಂಧಿಸಿದ ಯಾವುದೇ ತನಿಖೆ, ಕಾನೂನು ವ್ಯವಹರಣೆ ಅಥವಾ ಪರಿಹಾರೋಪಾಯವನ್ನು ಬಾಧಿಸತಕ್ಕದ್ದಲ್ಲ; ಮತ್ತು ನಿರಸನಗೊಳಿಸುವ ಅಧಿನಿಯಮವನ್ನು ಅಂಗೀಕರಿಸಿಲ್ಲದಿದ್ದರೆ ಹೇಗೋ ಹಾಗೆ ಅಂಥ ಯಾವುದೇ ತನಿಖೆಯನ್ನು, ಕಾನೂನು ವ್ಯವಹರಣೆಯನ್ನು ಅಥವಾ ಪರಿಹಾರೋಪಾಯವನ್ನು ನಡೆಸಬಹುದು, ಮುಂದುವರೆಸಬಹುದು ಅಥವಾ ಜಾರಿಗೆ ತರಬಹುದು ಮತ್ತು ಅಂಥ ಯಾವುದೇ ದಂಡ, ಮುಟ್ಟುಗೋಲು ಅಥವಾ ಶಿಕ್ಷೆಯನ್ನು ವಿಧಿಸಬಹುದು.

[4][**6ಎ. ಅಧಿನಿಯಮದಲ್ಲಿ ಪಾಠದ ತಿದ್ದುಪಡಿ ಮಾಡುವ ಅಧಿನಿಯಮಿತಿಯ ನಿರಸನ.–** ಈ ಅಧಿನಿಯಮದ ಪ್ರಾರಂಭದ ತರುವಾಯ ಮಾಡಲಾದ [2][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][2]ವು, ಯಾವುದೇ ವಿಷಯವನ್ನು ಸ್ಪಷ್ಟವಾಗಿ ಲೋಪಿಸುವ ಮೂಲಕ, ಸೇರಿಸುವ ಮೂಲಕ ಅಥವಾ ಪ್ರತಿಯೋಜಿಸುವ ಮೂಲಕ ಯಾವುದೇ ಅಧಿನಿಯಮದ ಪಾಠವನ್ನು ತಿದ್ದುಪಡಿ ಮಾಡುವ ಯಾವುದೇ ಅಧಿನಿಯಮಿತಿಯನ್ನು ನಿರಸನಗೊಳಿಸಿದಲ್ಲಿ, ಆಗ, ಬೇರೆ ಉದ್ದೇಶವು ಕಂಡುಬಂದ ಹೊರತು, ಹಾಗೆ ನಿರಸಿತವಾದ ಮತ್ತು ಅಂಥ ನಿರಸನದ ಕಾಲದಲ್ಲಿ ಜಾರಿಯಲ್ಲಿದ್ದ

ಅಧಿನಿಯಮಿತಿಯು ಮಾಡಿದ ಅಂಥ ಯಾವುದೇ ತಿದ್ದುಪಡಿಯು ಮುಂದುವರೆಯುವುದನ್ನು ಅಂಥ ನಿರಸನವು ಬಾಧಿಸತಕ್ಕದ್ದಲ್ಲ.][4]

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

4. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

**7. ನಿರಸನಗೊಳಿಸಲಾದ ಅಧಿನಿಯಮಿತಿಗಳ ಪುನರುಜ್ಜೀವನ.–** ಈ [2][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][2]ದಲ್ಲಿ, ಪೂರ್ಣವಾಗಿ ಅಥವಾ ಭಾಗಶಃ ನಿರಸನಗೊಳಿಸಲಾದ ಯಾವುದೇ ಅಧಿನಿಯಮಿತಿಯನ್ನು ಪೂರ್ಣವಾಗಿಯಾಗಲಿ ಅಥವಾ ಭಾಗಶಃವಾಗಿಯಾಗಲಿ ಪುನರುಜ್ಜೀವನಗೊಳಿಸುವ ಉದ್ದೇಶಕ್ಕಾಗಿ, ಆ ಉದ್ದೇಶವನ್ನು ಸ್ಪಷ್ಟವಾಗಿ ನಿರೂಪಿಸುವುದು ಅವಶ್ಯವಾಗಿರತಕ್ಕದ್ದು.

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಈ ಪ್ರಕರಣವು 1868ರ ಜನವರಿ ಮೂರನೇ ದಿನಾಂಕದ ತರುವಾಯ ಮಾಡಲಾದ ಎಲ್ಲಾ ಅಧಿನಿಯಮಿತಿಗಳಿಗೂ ಅನ್ವಯವಾಗುತ್ತದೆ.

**8. ನಿರಸನಗೊಳಿಸಲಾದ ಅಧಿನಿಯಮಿತಿಗಳಿಗೆ ಮಾಡಿದ ಉಲ್ಲೇಖಗಳನ್ನು ಅರ್ಥೈಸುವುದು.–** ಈ ಅಧಿನಿಯಮವು ಅಥವಾ ಈ ಅಧಿನಿಯಮ ಪ್ರಾರಂಭವಾದ ತರುವಾಯ ರಚಿಸಲಾದ [1][ಯಾವುದೇ ಮೈಸೂರು ಅಧಿನಿಯಮವು ಅಥವಾ ಕರ್ನಾಟಕ ಅಧಿನಿಯಮವು][1] ಹಿಂದಿನ ಯಾವುದೇ ಅಧಿನಿಯಮಿತಿಯ ಯಾವುದೇ ಉಪಬಂಧವನ್ನು ನಿರಸನಗೊಳಿಸಿದರೆ ಅಥವಾ ಮಾರ್ಪಾಟು ಮಾಡಿ ಅಥವಾ ಮಾರ್ಪಾಟಿಲ್ಲದೆ ಪುನಃ ಅಧಿನಿಯಮಿಸಿದರೆ, ಆಗ ಬೇರೆ ಉದ್ದೇಶವು ಕಂಡು ಬಂದ ಹೊರತು, ಹಾಗೆ ನಿರಸನಗೊಳಿಸಲಾದ ಉಪಬಂಧದ ಬಗ್ಗೆ ಯಾವುದೇ ಇತರ ಅಧಿನಿಯಮಿತಿಯಲ್ಲಿರುವ ಅಥವಾ ಯಾವುದೇ ಲಿಖಿತದಲ್ಲಿರುವ ಉಲ್ಲೇಖಗಳನ್ನು ಹಾಗೆ ಪುನಃ ಅಧಿನಿಯಮಿಸಲಾದ ಉಪಬಂಧದ ಬಗೆಗಿನ ಉಲ್ಲೇಖಗಳು ಎಂದು ಅರ್ಥೈಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**9. ಕಾಲದ ಪ್ರಾರಂಭ ಮತ್ತು ಮುಕ್ತಾಯ.–** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ರಚಿಸಲಾದ [1][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][1] ದಲ್ಲಿ ಹಲವಾರು ದಿನಗಳ ಸರಣಿಯಲ್ಲಿ ಅಥವಾ ಯಾವುದೇ ಇತರ ಕಾಲಾವಧಿಯಲ್ಲಿ ಮೊದಲ ದಿನವನ್ನು ಬಿಟ್ಟುಬಿಡುವ ಉದ್ದೇಶಕ್ಕಾಗಿ ' ಇಂದ ' ಎಂಬುದನ್ನು ಉಪಯೋಗಿಸಿದರೆ ಮತ್ತು ಹಲವಾರು ದಿನಗಳ ಸರಣಿಯಲ್ಲಿ ಅಥವಾ ಯಾವುದೇ ಇತರ ಕಾಲಾವಧಿಯಲ್ಲಿ ಕೊನೆಯ ದಿನವನ್ನು ಸೇರಿಸಿಕೊಳ್ಳುವ ಉದ್ದೇಶಕ್ಕಾಗಿ ' ವರೆಗೆ ' ಎಂಬುದನ್ನು ಉಪಯೋಗಿಸಿದರೆ ಸಾಕಷ್ಟಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಈ ಪ್ರಕರಣವು 1868ರ ಜನವರಿ ಮೂರನೇ ದಿನಾಂಕದ ತರುವಾಯ ರಚಿಸಲಾದ ಎಲ್ಲ ಅಧಿನಿಯಮಿತಿಗಳಿಗೂ ಅನ್ವಯವಾಗುತ್ತದೆ.

**10. ಕಾಲವನ್ನು ಲೆಕ್ಕಹಾಕುವುದು.–** ಈ ಅಧಿನಿಯಮದ ಪ್ರಾರಂಭದ ತರುವಾಯ ರಚಿಸಲಾದ [1][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][1] ದ ಮೂಲಕ, ಒಂದು

ನಿರ್ದಿಷ್ಟ ದಿನದಂದು ಅಥವಾ ನಿಯಮಿಸಲಾದ ಕಾಲಾವಧಿಯೊಳಗೆ ಯಾವುದೇ ನ್ಯಾಯಾಲಯದಲ್ಲಿ ಅಥವಾ ಕಚೇರಿಯಲ್ಲಿ ಯಾವುದೇ ಕೃತ್ಯವನ್ನು ಮಾಡಬೇಕೆಂದು ಅಥವಾ ಯಾವುದೇ ವ್ಯವಹರಣೆಯನ್ನು ಕೈಗೊಳ್ಳಬೇಕೆಂದು ನಿರ್ದೇಶಿಸಿದ್ದರೆ, ಅಥವಾ ಮಾಡಲು ಅಥವಾ ಕೈಗೊಳ್ಳಲು ಅವಕಾಶ ಕೊಟ್ಟಿದ್ದರೆ, ಆಗ, ಅ ದಿನದಂದು ಅಥವಾ ನಿಯಮಿಸಲಾದ ಕಾಲಾವಧಿಯ ಕೊನೆಯ ದಿನದಂದು ನ್ಯಾಯಾಲಯವು ಅಥವಾ ಕಚೇರಿಯು ಮುಚ್ಚಿದ್ದರೆ, ನ್ಯಾಯಾಲಯವು ಅಥವಾ ಕಚೇರಿಯು ತೆರೆದಿರುವ ತರುವಾಯದ ದಿನದಂದು ಅದನ್ನು ಮಾಡಿದರೆ ಅಥವಾ ಕೈಗೊಂಡರೆ ಆ ಕೃತ್ಯವನ್ನು ಅಥವಾ ಆ ವ್ಯವಹರಣೆಯನ್ನು ಯುಕ್ತ ಕಾಲದಲ್ಲಿ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಪರಿಗಣಿಸತಕ್ಕದ್ದು:

ಪರಂತು, ಈ ಪ್ರಕರಣದಲ್ಲಿರುವುದು ಯಾವುದೂ, [2][ಭಾರತ ಕಾಲಪರಿಮಿತಿ ಅಧಿನಿಯಮ, 1908][2] ಅನ್ವಯಿಸುವ ಯಾವುದೇ ಕೃತ್ಯ ಅಥವಾ ವ್ಯವಹರಣೆಗೆ ಅನ್ವಯಿಸತಕ್ಕದ್ದಲ್ಲ.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ.

**11. ದೂರಗಳ ಅಳತೆ.–** ಈ ಅಧಿನಿಯಮದ ಪ್ರಾರಂಭದ ತರುವಾಯ ರಚಿಸಲಾದ [1][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][1] ದ ಉದ್ದೇಶಕ್ಕಾಗಿ ಯಾವುದೇ ದೂರವನ್ನು ಅಳೆಯುವಲ್ಲಿ, ಬೇರೆ ಉದ್ದೇಶವು ಕಂಡು ಬಂದ ಹೊರತು, ಸಮತಲ ಕ್ಷೇತ್ರದ ಮೇಲೆ ಸರಳ ರೇಖೆಯಲ್ಲಿ ಅಳೆಯತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**12. ಅಧಿನಿಯಮಿತಿಗಳ ಮೇರೆಗೆ ಪ್ರಮಾಣಾನುಸಾರ ಶುಲ್ಕವನ್ನು ತೆಗೆದು ಕೊಳ್ಳುವುದು.–** ಈಗ ಜಾರಿಯಲ್ಲಿರುವ ಅಥವಾ ಇನ್ನು ಮುಂದೆ ಜಾರಿಗೆ ಬರುವ ಯಾವುದೇ ಅಧಿನಿಯಮಿತಿಯ ಮೂಲಕ ತೂಕ, ಅಳತೆ ಅಥವಾ ಬೆಲೆಗೆ ಅನುಸಾರವಾಗಿ ಯಾವುದೇ ವಸ್ತುವಿನ ಅಥವಾ ವಾಣಿಜ್ಯ ಸರಕಿನ ನೀಡಲಾದ ಯಾವುದೇ ಪ್ರಮಾಣದ ಮೇಲೆ ಯಾವುದೇ ಸೀಮಾಶುಲ್ಕ ಅಥವಾ ಅಬ್ಕಾರಿ ಶುಲ್ಕವನ್ನು ಅಥವಾ ಅದೇ ಸ್ವರೂಪದ ಯಾವುದೇ ಶುಲ್ಕವನ್ನು ವಿಧಿಸಬೇಕಾದರೆ, ಅದೇ ದರದ ಪ್ರಕಾರ ಅದಕ್ಕಿಂತ ಹೆಚ್ಚಿನ ಅಥವಾ ಕಡಿಮೆಯ ಪ್ರಮಾಣದ ಮೇಲೆ ಆ ಶುಲ್ಕವನ್ನು ವಿಧಿಸತಕ್ಕದ್ದು.

**13. ಲಿಂಗ ಮತ್ತು ವಚನ.–** ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು, ಎಲ್ಲ ಅಧಿನಿಯಮಿತಿಗಳಲ್ಲಿ,

(1) ಪುಲ್ಲಿಂಗದ ಅರ್ಥಕೊಡುವ ಪದಗಳು ಸ್ತ್ರೀಲಿಂಗವನ್ನು ಒಳಗೊಳ್ಳುವುದೆಂದು ತಿಳಿಯತಕ್ಕದ್ದು; ಮತ್ತು

(2) ಏಕವಚನದಲ್ಲಿರುವ ಪದಗಳು ಬಹುವಚನವನ್ನು, ಬಹುವಚನದಲ್ಲಿರುವ ಪದಗಳು ಏಕವಚನವನ್ನು ಒಳಗೊಳ್ಳತಕ್ಕದ್ದು.

## ಅಧಿಕಾರಗಳು ಮತ್ತು ಕಾರ್ಯಕರ್ತರು

**14. ಪ್ರದಾನಮಾಡಲಾದ ಅಧಿಕಾರಗಳನ್ನು ಕಾಲಕಾಲಕ್ಕೆ ಚಲಾಯಿಸ ಬೇಕಾಗಿರುವುದು.–** ಈ ಅಧಿನಿಯಮವು ಪ್ರಾರಂಭವಾದ ತರುವಾಯ ರಚಿಸಲಾದ [1][ಯಾವುದೇ ಮೈಸೂರು ಅಧಿನಿಯಮ

ಅಥವಾ ಕರ್ನಾಟಕ ಅಧಿನಿಯಮ][1]ದ ಮೂಲಕ [2][xxx][2] ಯಾವುದೇ ಅಧಿಕಾರವನ್ನು ಪ್ರದಾನ ಮಾಡಲಾಗಿದ್ದಲ್ಲಿ, ಸಂದರ್ಭವು ಅಗತ್ಯಪಡಿಸಿದಂತೆ ಕಾಲಕಾಲಕ್ಕೆ ಆ ಅಧಿಕಾರವನ್ನು ಚಲಾಯಿಸಬಹುದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

2. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ "ಆ ಸರ್ಕಾರಕ್ಕೆ " ಎಂಬ ಪದಗಳನ್ನು ಬಿಟ್ಟುಬಿಡಲಾಗಿದೆ.

**15. ನೇಮಕ ಮಾಡುವ ಅಧಿಕಾರವು ಪದನಿಮಿತ್ತವಾಗಿ ನೇಮಕ ಮಾಡುವ ಅಧಿಕಾರವನ್ನು ಒಳಗೊಳ್ಳುವುದು.–** ಯಾವುದೇ ಸ್ಥಾನವನ್ನು ಭರ್ತಿ ಮಾಡಲು ಅಥವಾ ಯಾವುದೇ ಪ್ರಕಾರ್ಯವನ್ನು ನಿರ್ವಹಿಸಲು ಯಾರೇ ವ್ಯಕ್ತಿಯನ್ನು ನೇಮಕ ಮಾಡುವ ಅಧಿಕಾರವನ್ನು ಯಾವುದೇ ಅಧಿನಿಯಮಿತಿಯು ಪ್ರದಾನ ಮಾಡಿದ್ದಲ್ಲಿ, ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿದ ಹೊರತು, ಅಂಥ ಯಾವುದೇ ನೇಮಕವನ್ನು ಈ ಅಧಿನಿಯಮವು ಪ್ರಾರಂಭವಾದ ತರುವಾಯ ಮಾಡಿದ್ದರೆ, ಅ ಪದದ ಹೆಸರಿನಿಂದ ಅಥವಾ ಅವನ ಪದದ ಕಾರಣದಿಂದಾಗಿ ನೇಮಕವನ್ನು ಮಾಡಬಹುದು.

**16. ನೇಮಕ ಮಾಡುವ ಅಧಿಕಾರವು ಅಮಾನತುಗೊಳಿಸುವ ಅಥವಾ ವಜಾ ಮಾಡುವ ಅಧಿಕಾರವನ್ನು ಒಳಗೊಂಡಿರುವುದು.–** ಯಾವುದೇ ಅಧಿನಿಯಮದ ಮೂಲಕ ಯಾವುದೇ ನೇಮಕವನ್ನು ಮಾಡಲು ಅಧಿಕಾರವನ್ನು ಪ್ರದಾನ ಮಾಡಿರುವಲ್ಲಿ, ಬೇರೆ ಉದ್ದೇಶವು ಕಂಡುಬಂದ ಹೊರತು ನೇಮಕವನ್ನು ಮಾಡಲು [1][ತತ್ಕಾಲದಲ್ಲಿ][1] ಅಧಿಕಾರವುಳ್ಳ ಪ್ರಾಧಿಕಾರವು, [2][ತಾನೇ ಅಥವಾ ಇತರ ಯಾವುದೇ ಪ್ರಾಧಿಕಾರವು ನೇಮಕ ಮಾಡಿದ ಯಾರೇ ವ್ಯಕ್ತಿಯನ್ನು,][2] ಆ ಅಧಿಕಾರವನ್ನು ಚಲಾಯಿಸಿ ಅಮಾನತ್ತಿನಲ್ಲಿಡಲು ಅಥವಾ ವಜಾ ಮಾಡಲು ಸಹ ಅಧಿಕಾರ ಹೊಂದಿರತಕ್ಕದ್ದು.

1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

2. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ.

**17. ಪ್ರಕಾರ್ಯಕರ್ತರ ಬದಲಿ.–** ಈ ಅಧಿನಿಯಮವು ಪ್ರಾರಂಭವಾದ ತರುವಾಯ ರಚಿಸಲಾದ [1][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][1] ದಲ್ಲಿ ಒಂದು ಅಧಿಕಾರ ಪದದ ಪ್ರಕಾರ್ಯಗಳನ್ನು ತತ್ಕಾಲದಲ್ಲಿ ನಿರ್ವಹಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಗೆ ಅಥವಾ ಹಲವು ವ್ಯಕ್ತಿಗಳಿಗೆ ಒಂದು ಕಾನೂನು ಅನ್ವಯಿಸುತ್ತದೆಂದು ಸೂಚಿಸುವ ಉದ್ದೇಶಕ್ಕಾಗಿ, ಆ ಸಮಯದಲ್ಲಿ ಪ್ರಕಾರ್ಯಗಳನ್ನು ನಿರ್ವಹಿಸುತ್ತಿರುವ ಅಧಿಕಾರಿಯು ಅಥವಾ ಸಾಮಾನ್ಯವಾಗಿ ಆ ಪ್ರಕಾರ್ಯಗಳನ್ನು ನಿರ್ವಹಿಸುವ ಅಧಿಕಾರ ಪದದ ಹೆಸರನ್ನು ಹೇಳಿದರೆ ಸಾಕಷ್ಟಾಗತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಈ ಪ್ರಕರಣವು 1868 ರ ಜನವರಿ ಮೂರನೇ ದಿನಾಂಕದ ತರುವಾಯ ರಚಿಸಲಾದ ಎಲ್ಲ ಅಧಿನಿಯಮಿತಿಗಳಿಗೂ ಅನ್ವಯಿಸುತ್ತದೆ.

**18. ಉತ್ತರಾಧಿಕಾರಿಗಳು.–** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ರಚಿಸಲಾದ [1][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][1] ದಲ್ಲಿ ಕಾರ್ಯಕರ್ತರ ಅಥವಾ ಶಾಶ್ವತ ಉತ್ತರಾಧಿಕಾರವಿರುವ ನಿಗಮಗಳ ಉತ್ತರಾಧಿಕಾರಿಗಳಿಗೆ ಯಾವುದೇ ಕಾನೂನು ಸಂಬಂಧಿಸಿರುವುದನ್ನು ಸೂಚಿಸುವ ಉದ್ದೇಶಕ್ಕಾಗಿ, ಆ ಕಾರ್ಯಕರ್ತರು ಅಥವಾ ನಿಗಮಗಳಿಗೆ ಆ ಕಾನೂನಿಗಿರುವ ಸಂಬಂಧವನ್ನು ವ್ಯಕ್ತಗೊಳಿಸಿದರೆ ಸಾಕಷ್ಟಾಗತಕ್ಕದ್ದು. ಕಾನೂನಿಗಿರುವ ಸಂಬಂಧವನ್ನು

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

(2) ಈ ಪ್ರಕರಣವು 1868ರ ಜನವರಿ ಮೂರನೇ ದಿನಾಂಕದ ತರುವಾಯ ರಚಿಸಲಾದ ಎಲ್ಲ ಅಧಿನಿಯಮಿತಿಗಳಿಗೂ ಸಹ ಅನ್ವಯವಾಗುತ್ತದೆ.

**19. ಕಚೇರಿ ಮುಖ್ಯಸ್ಥ ಮತ್ತು ಅಧೀನರು.–** (1) ಈ ಅಧಿನಿಯಮವು ಪ್ರಾರಂಭವಾದ ತರುವಾಯ ರಚಿಸಲಾದ [1][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][1] ದಲ್ಲಿ ಕಚೇರಿಯ ಮುಖ್ಯಸ್ಥ ಅಥವಾ ವರಿಷ್ಠನಿಗೆ ಸಂಬಂಧಿಸಿದ ಕಾನೂನು, ಅವರ ಸ್ಥಾನದಲ್ಲಿ ಆ ಪದದ ಕರ್ತವ್ಯಗಳನ್ನು ಕಾನೂನುಬದ್ಧವಾಗಿ ನೆರವೇರಿಸುತ್ತಿರುವ ಉಪಅಧಿಕಾರಿಗಳಿಗೂ ಅಥವಾ ಅವರ ಅಧೀನರಿಗಳಿಗೂ ಅನ್ವಯಿಸತಕ್ಕದ್ದೆಂದು ವ್ಯಕ್ತಗೊಳಿಸುವ ಉದ್ದೇಶಕ್ಕಾಗಿ, ಆ ವರಿಷ್ಠಾಧಿಕಾರಿಯ ಕರ್ತವ್ಯವನ್ನು ನಿಯಮಿಸಿದರೆ ಸಾಕಷ್ಟಾಗತಕ್ಕದ್ದು.

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

(2) ಈ ಪ್ರಕರಣವು, 1868ರ ಜನವರಿ ಮೂರನೇ ದಿನಾಂಕದ ತರುವಾಯ ರಚಿಸಲಾದ ಎಲ್ಲ ಅಧಿನಿಯಮಿತಿಗಳಿಗೂ ಅನ್ವಯವಾಗುತ್ತದೆ.

### ಅಧಿನಿಯಮಿತಿಗಳ ಮೇರೆಗೆ ಮಾಡಲಾದ ಆದೇಶಗಳು, ನಿಯಮಗಳು, ಇತ್ಯಾದಿಗಳಿಗೆ ಸಂಬಂಧಿಸಿದ ಉಪಬಂಧಗಳು

**20. ಅಧಿನಿಯಮಿತಿಗಳ ಮೇರೆಗೆ ಹೊರಡಿಸಲಾದ ಆದೇಶಗಳು, ಇತ್ಯಾದಿಗಳ ಅರ್ಥಾನ್ವಯ.–** ಯಾವುದೇ [1][ಅಧಿಸೂಚನೆ,][1] ಆದೇಶ, ಯೋಜನೆ, ನಿಯಮ, ನಮೂನೆ ಅಥವಾ ಉಪವಿಧಿಯನ್ನು ಹೊರಡಿಸಲು ಯಾವುದೇ ಅಧಿನಿಯಮಿತಿಯ ಮೂಲಕ ಅಧಿಕಾರವನ್ನು ಪ್ರದಾನ ಮಾಡಿದ್ದಲ್ಲಿ, ಆ [1][ಅಧಿಸೂಚನೆ,][1] ಆದೇಶ, ಯೋಜನೆ, ನಿಯಮ, ನಮೂನೆ ಅಥವಾ ಉಪವಿಧಿಯಲ್ಲಿ ಉಪಯೋಗಿಸಿದ ಪದಾವಳಿಗಳಿಗೆ, ಅದನ್ನು ಈ ಅಧಿನಿಯಮವು ಪ್ರಾರಂಭವಾದ ತರುವಾಯ ಮಾಡಲಾಗಿದ್ದರೆ, ವಿಷಯಕ್ಕೆ ಅಥವಾ ಸಂದರ್ಭಕ್ಕೆ ವಿರುದ್ಧವಾದುದು ಏನಾದರೂ ಇದ್ದ ಹೊರತು, ಅಧಿಕಾರವನ್ನು ಪ್ರದಾನ ಮಾಡುವ ಅಧಿನಿಯಮಿತಿಯಲ್ಲಿ ಅವುಗಳಿಗೆ ಇರುವ ಅರ್ಥಗಳೇ ಅನುಕ್ರಮವಾಗಿ ಇರತಕ್ಕದ್ದು.

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

**21. ಅಧಿಸೂಚನೆಗಳು, ಆದೇಶಗಳು, ನಿಯಮಗಳು ಅಥವಾ ಉಪವಿಧಿಗಳನ್ನು ಮಾಡುವ ಅಧಿಕಾರವು ಅವುಗಳಿಗೆ ಸೇರಿಸುವ, ತಿದ್ದುಪಡಿ ಮಾಡುವ, ಅವುಗಳನ್ನು ವ್ಯತ್ಯಾಸಗೊಳಿಸುವ ಅಥವಾ ರದ್ದು ಮಾಡುವ ಅಧಿಕಾರವನ್ನು ಒಳಗೊಳ್ಳುವುದು:–** [1][ಅಧಿಸೂಚನೆಗಳು,][1] ಆದೇಶಗಳು, ನಿಯಮಗಳು ಅಥವಾ ಉಪವಿಧಿಗಳನ್ನು [2][ಹೊರಡಿಸಲು][2] ಯಾವುದೇ ಅಧಿನಿಯಮಿತಿಯು ಅಧಿಕಾರವನ್ನು ಪ್ರದಾನ ಮಾಡಿದಲ್ಲಿ, ಆ ಅಧಿಕಾರವು ಹಾಗೆ [2][ಹೊರಡಿಸಲಾದ][2] [1][ಅಧಿಸೂಚನೆಗಳು,][1] ಆದೇಶಗಳು, ವಿನಿಯಮಗಳು ಅಥವಾ ಉಪವಿಧಿಗಳಿಗೆ ಏನನ್ನಾದರೂ ಸೇರಿಸಲು, ಅವುಗಳನ್ನು ತಿದ್ದುಪಡಿ ಮಾಡಲು, ವ್ಯತ್ಯಾಸಗೊಳಿಸಲು ಅಥವಾ ರದ್ದುಮಾಡಲು ಅಂಥದೇ ರೀತಿಯಲ್ಲಿ ಚಲಾಯಿಸಬಹುದಾದ ಅಧಿಕಾರವನ್ನು ಒಳಗೊಳ್ಳುತ್ತದೆ ಮತ್ತು ಆ ಅಧಿಕಾರವು ಅದೇ ರೀತಿಯ ಸಮ್ಮತಿ ಮತ್ತು ಷರತ್ತುಗಳು, ಯಾವುವಾದರೂ ಇದ್ದರೆ, ಅವುಗಳಿಗೆ ಒಳಪಟ್ಟಿರುತ್ತದೆ. ಅಧಿಕಾರವನ್ನು ಒಳಗೊಳ್ಳುತ್ತದೆ ಮತ್ತು ಆ

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

2. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಪ್ರತಿಯೋಜಿಸಲಾಗಿದೆ.

**22. ಅಧಿನಿಯಮಿತಿಯನ್ನು ಅಂಗೀಕಾರ ಮಾಡಿದ ಮತ್ತು ಅದರ ಪ್ರಾರಂಭದ ನಡುವಣ ಅವಧಿಯಲ್ಲಿ ನಿಯಮಗಳನ್ನು ಅಥವಾ ಉಪವಿಧಿಗಳನ್ನು ರಚಿಸುವುದು ಅಥವಾ ಆದೇಶಗಳನ್ನು ಹೊರಡಿಸುವುದು.–** ಅಂಗೀಕಾರ ಮಾಡಿದ ಕೂಡಲೇ ಜಾರಿಗೆ ಬರಬೇಕಾಗಿಲ್ಲದ ಯಾವುದೇ ಅಧಿನಿಯಮಿತಿಯ ಮೂಲಕ, ಅಧಿನಿಯಮಿತಿಯ ಅನ್ವಯಕ್ಕೆ ಸಂಬಂಧಿಸಿದಂತೆ ಅಥವಾ ಯಾವುದೇ ನ್ಯಾಯಾಲಯ ಅಥವಾ ಕಛೇರಿಯ ಸ್ಥಾಪನೆಗೆ ಸಂಬಂಧಿಸಿದಂತೆ ಅಥವಾ ಅದರ ಮೇರೆಗೆ ಯಾರೇ ನ್ಯಾಯಾಧೀಶ ಅಥವಾ ಅಧಿಕಾರಿಯನ್ನು ನೇಮಕ ಮಾಡುವುದಕ್ಕೆ ಸಂಬಂಧಿಸಿದಂತೆ ಅಥವಾ ಆ ಅಧಿನಿಯಮದ ಮೇರೆಗೆ ಮಾಡಬೇಕಾದ ಯಾವುದೇ ಕೃತ್ಯವನ್ನು ಯಾವ ವ್ಯಕ್ತಿಯು ಮಾಡಬೇಕು ಅಥವಾ ಯಾವ ಕಾಲದಲ್ಲಿ ಮಾಡಬೇಕು ಅಥವಾ ಯಾವ ಸ್ಥಳದಲ್ಲಿ ಮಾಡಬೇಕು ಅಥವಾ ಯಾವ ರೀತಿಯಲ್ಲಿ ಮಾಡಬೇಕು ಅಥವಾ ಹಾಗೆ ಮಾಡಲಾದುದಕ್ಕೆ ಎಷ್ಟು ಫೀಜು ಕೊಡುವುದು ಇವುಗಳಿಗೆ ಸಂಬಂಧಿಸಿ ಆ ಅಧಿಕಾರವನ್ನು ಆ ಅಧಿನಿಯಮಿತಿಯನ್ನು ಅಂಗೀಕರಿಸಿದ ತರುವಾಯ ಯಾವುದೇ ಕಾಲದಲ್ಲಿ ಚಲಾಯಿಸಬಹುದು; ಆದರೆ ಹಾಗೆ ಮಾಡಲಾದ ಅಥವಾ ಹೊರಡಿಸಲಾದ ನಿಯಮಗಳು, ಉಪವಿಧಿಗಳು ಅಥವಾ ಆದೇಶಗಳು ಆ ಅಧಿನಿಯಮಿತಿಯು ಪ್ರಾರಂಭವಾಗುವವರೆಗೆ ಪರಿಣಾಮಕಾರಿಯಾಗತಕ್ಕದ್ದಲ್ಲ.

**23. ಪೂರ್ವ ಪ್ರಕಟಣೆಯ ತರುವಾಯ ನಿಯಮಗಳನ್ನು ಅಥವಾ ಉಪವಿಧಿಗಳನ್ನು ರಚಿಸುವುದಕ್ಕೆ ಅನ್ವಯಿಸುವ ಉಪಬಂಧಗಳು.–** ಯಾವುದೇ ಅಧಿನಿಯಮದ ಮೂಲಕ ನಿಯಮಗಳನ್ನು ಅಥವಾ ಉಪವಿಧಿಗಳನ್ನು ಪೂರ್ವ ಪ್ರಕಟಣೆಯ ತರುವಾಯ ಮಾಡತಕ್ಕದ್ದೆಂಬ ಷರತ್ತಿಗೆ ಒಳಪಟ್ಟು, ಆ ನಿಯಮಗಳನ್ನು ಅಥವಾ ಉಪವಿಧಿಗಳನ್ನು ರಚಿಸಲು ಅಧಿಕಾರವನ್ನು ಕೊಡಬೇಕೆಂದು ವ್ಯಕ್ತಪಡಿಸಿರುವಲ್ಲಿ, ಈ ಕೆಳಕಂಡ ಉಪಬಂಧಗಳು ಅನ್ವಯಿಸತಕ್ಕದ್ದು, ಎಂದರೆ:–

(1) ನಿಯಮಗಳನ್ನು ಅಥವಾ ಉಪವಿಧಿಗಳನ್ನು ರಚಿಸಲು ಅಧಿಕಾರ ಹೊಂದಿರುವ ಪ್ರಾಧಿಕಾರವು ಅವುಗಳನ್ನು ಮಾಡುವುದಕ್ಕೆ ಮುಂಚೆ, ಅವುಗಳಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳ ತಿಳಿವಳಿಕೆಗಾಗಿ, ಉದ್ದೇಶಿಸಲಾದ ನಿಯಮಗಳ ಅಥವಾ ಉಪವಿಧಿಗಳ ಕರಡನ್ನು ಪ್ರಕಟಿಸತಕ್ಕದ್ದು ;

(2) ಆ ಪ್ರಾಧಿಕಾರವು ಸಾಕಷ್ಟೆಂದು ಭಾವಿಸುವಂಥ ರೀತಿಯಲ್ಲಿ ಅಥವಾ ಪೂರ್ವ ಪ್ರಕಟಣೆಗೆ ಸಂಬಂಧಿಸಿದ ಷರತ್ತು ಸರ್ಕಾರವು ನಿಯಮಿಸುವಂಥ ರೀತಿಯಲ್ಲಿ ಇರಬೇಕೆಂದು ಅಗತ್ಯಪಡಿಸಿದರೆ, ಹಾಗೆ ಪ್ರಕಟಣೆಯನ್ನು ಮಾಡತಕ್ಕದ್ದು ;

(3) ಕರಡಿನ ಜೊತೆಗೆ, ಆ ಕರಡನ್ನು ಯಾವ ದಿನಾಂಕದಂದು ಅಥವಾ ದಿನಾಂಕದ ತರುವಾಯ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೆಂಬುದನ್ನು ನಿರ್ದಿಷ್ಟಪಡಿಸುವ ಒಂದು ನೋಟೀಸನ್ನು ಪ್ರಕಟಿಸತಕ್ಕದ್ದು ;

(4) ನಿಯಮಗಳನ್ನು ಅಥವಾ ಉಪವಿಧಿಗಳನ್ನು ರಚಿಸುವ ಅಧಿಕಾರ ಹೊಂದಿರುವ ಪ್ರಾಧಿಕಾರವು ಮತ್ತು ಆ ನಿಯಮಗಳನ್ನು ಅಥವಾ ಉಪವಿಧಿಗಳನ್ನು ಇನ್ನೊಂದು ಪ್ರಾಧಿಕಾರದ ಮಂಜೂರಾತಿ, ಅನುಮೋದನೆ ಅಥವಾ ಸಹಮತದೊಂದಿಗೆ ರಚಿಸಬೇಕಾದಲ್ಲಿ, ಆ ಪ್ರಾಧಿಕಾರವೂ ಸಹ, ಹಾಗೆ ನಿರ್ದಿಷ್ಟಪಡಿಸಲಾದ ದಿನಾಂಕಕ್ಕೆ ಮುಂಚೆ ಅಂಥ ನಿಯಮಗಳನ್ನು ಅಥವಾ ಉಪವಿಧಿಗಳನ್ನು ರಚಿಸಲು ಅಧಿಕಾರಹೊಂದಿರುವ ಪ್ರಾಧಿಕಾರಕ್ಕೆ, ಕರಡಿಗೆ ಸಂಬಂಧಿಸಿದಂತೆ ಯಾರೇ ವ್ಯಕ್ತಿಯಿಂದ ಬರಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ಪರಿಶೀಲಿಸತಕ್ಕದ್ದು;

(5) ನಿಯಮಗಳನ್ನು ಅಥವಾ ಉಪವಿಧಿಗಳನ್ನು ಪೂರ್ವ ಪ್ರಕಟಣೆಯ ತರುವಾಯ ರಚಿಸಲು ಇರುವ ಅಧಿಕಾರವನ್ನು ಚಲಾಯಿಸಿ ರಚಿಸಲಾಗಿದೆಯೆಂದು ಹೇಳಲಾದ ನಿಯಮ ಅಥವಾ

ಉಪವಿಧಿಯನ್ನು ರಾಜಪತ್ರದಲ್ಲಿ ಪ್ರಕಟಿಸುವುದು, ಆ ನಿಯಮವನ್ನು ಅಥವಾ ಉಪವಿಧಿಯನ್ನು ಕ್ರಮಬದ್ಧವಾಗಿ ರಚಿಸಲಾಗಿದೆಯೆಂಬುದರ ಬಗ್ಗೆ ನಿರ್ಣಾಯಕ ರುಜುವಾತಾಗಿರತಕ್ಕದ್ದು.

**24. ನಿರಸನಗೊಳಿಸಲಾದ ಮತ್ತು ಪುನಃ ಅಧಿನಿಯಮಿಸಲಾದ ಅಧಿನಿಯಮಿತಿಗಳ ಮೇರೆಗೆ ಹೊರಡಿಸಲಾದ ಆದೇಶ, ಇತ್ಯಾದಿಗಳ ಮುಂದುವರಿಕೆ.–** ಈ ಅಧಿನಿಯಮವು ಪ್ರಾರಂಭವಾದ ತರುವಾಯ ಯಾವುದೇ ಅಧಿನಿಯಮಿತಿಯನ್ನು ನಿರಸನಗೊಳಿಸಲಾಗಿದ್ದಲ್ಲಿ ಮತ್ತು ಮಾರ್ಪಾಟು ಮಾಡಿ ಅಥವಾ ಮಾರ್ಪಾಟಿಲ್ಲದೆ ಪುನ: ಅಧಿನಿಯಮಿಸಲಾಗಿದ್ದಲ್ಲಿ, ಆಗ, ಅನ್ಯಥಾ ವ್ಯಕ್ತವಾಗಿ ಉಪಬಂಧಿಸಿದ್ದ ಹೊರತು, ನಿರಸನಗೊಳಿಸಲಾದ ಅಧಿನಿಯಮಿತಿಯ ಮೇರೆಗೆ [1][ಮಾಡಲಾದ][1] ಯಾವುದೇ [1][ನೇಮಕ][1] ಅಥವಾ ಹೊರಡಿಸಲಾದ ಯಾವುದೇ [1][ಅಧಿಸೂಚನೆ][1] ಆದೇಶ ಅಥವಾ [1][ರಚಿಸಲಾದ][1] ಯಾವುದೇ ಯೋಜನೆ, ನಿಯಮ, ನಮೂನೆ ಅಥವಾ ಉಪವಿಧಿಯು, ಪುನಃ ಅಧಿನಿಯಮಿಸಲಾದ ಉಪಬಂಧಗಳಿಗೆ ಅದು ಅಸಂಗತವಾಗದಿರುವಷ್ಟರ ಮಟ್ಟಿಗೆ ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಹಾಗೆ ಪುನಃ ಅಧಿನಿಯಮಿಸಲಾದ ಐಪಬಂಧಗಳ ಮೇರೆಗೆ [1][ಮಾಡಿದ][1] ಯಾವುದೇ [1][ನೇಮಕ][1] ಅಥವಾ ಹೊರಡಿಸಿದ ಯಾವುದೇ [1][ಅಧಿಸೂಚನೆ,][1] ಆದೇಶ ಅಥವಾ [1][ರಚಿಸಲಾದ][1] ಯಾವುದೇ ಯೋಜನೆ, ನಿಯಮ, ನಮೂನೆ ಅಥವಾ ಉಪವಿಧಿಯ ಮೂಲಕ ಅದನ್ನು ರದ್ದುಗೊಳಿಸಿದ ಹೊರತು ಮತ್ತು ರದ್ದುಗೊಳಿಸುವವರೆಗೆ ಅದನ್ನು ಹಾಗೆ ಪುನಃ ಅಧಿನಿಯಮಿಸಲಾದ ಉಪಬಂಧಗಳ ಮೇರೆಗೆ [1][ಮಾಡಲಾಗಿದೆಯೆಂದು ಅಥವಾ][1] ಹೊರಡಿಸಲಾಗಿದೆಯೆಂದು ಅಥವಾ ರಚಿಸಲಾಗಿದೆಯೆಂದು ಭಾವಿಸತಕ್ಕದ್ದು.

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ ಸೇರಿಸಲಾಗಿದೆ.

## ಸಂಕೀರ್ಣ

**25. ಜುಲ್ಮಾನೆಗಳ ವಸೂಲಿ.–** ಭಾರತ ದಂಡ ಸಂಹಿತೆಯ 63 ರಿಂದ 70 ರವರೆಗಿನ ಪ್ರಕರಣಗಳು ಮತ್ತು ಜುಲ್ಮಾನೆಗಳನ್ನು ವಿಧಿಸುವ ಸಲುವಾಗಿ ವಾರೆಂಟು ಹೊರಡಿಸುವುದಕ್ಕೆ ಮತ್ತು ಅದನ್ನು ಜಾರಿಗೊಳಿಸುವುದಕ್ಕೆ ಸಂಬಂಧಿಸಿದಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ದಂಡ ಪ್ರಕ್ರಿಯಾ ಸಂಹಿತೆಯ ಉಪಬಂಧಗಳು, ಯಾವುದೇ ಅಧಿನಿಯಮಿತಿ, ನಿಯಮ ಅಥವಾ ಉಪವಿಧಿಯಲ್ಲಿ ತದ್ವಿರುದ್ಧವಾದ ವ್ಯಕ್ತ ಉಪಬಂಧವಿದ್ದ ಹೊರತು, ಆ ಅಧಿನಿಯಮಿತಿ, ನಿಯಮ ಅಥವಾ ಉಪವಿಧಿಯ ಮೇರೆಗೆ ವಿಧಿಸಲಾದ ಎಲ್ಲಾ ಜುಲ್ಮಾನೆಗಳಿಗೂ ಅನ್ವಯವಾಗತಕ್ಕದ್ದು.

**26. ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿನಿಯಮಿತಿಗಳ ಮೇರೆಗೆ ದಂಡನೀಯವಾದ ಅಪರಾಧಗಳಿಗೆ ಸಂಬಂಧಿಸಿದ ಉಪಬಂಧ.–** ಎಸಗಿದ ಒಂದು ಕೃತ್ಯ ಅಥವಾ ಲೋಪವು ಎರಡು ಅಥವಾ ಅದಕ್ಕಿಂತ ಹೆಚ್ಚು ಅಧಿನಿಯಮಿತಿಗಳ ಮೇರೆಗೆ ಅಪರಾಧವಾಗಿದ್ದಲ್ಲಿ, ಆಗ, ಅಪರಾಧಿಯು ಎರಡರಲ್ಲೊಂದರ ಮೇರೆಗೆ ಅಥವಾ ಆ ಅಧಿನಿಯಮಿತಿಗಳಲ್ಲಿ ಯಾವುದಾದರೂ ಒಂದರ ಮೇರೆಗೆ ಕಾನೂನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು, ಆದರೆ, ಒಂದೇ ಅಪರಾಧಕ್ಕಾಗಿ ಎರಡು ಬಾರಿ ದಂಡನೆಗೆ ಗುರಿಯಾಗತಕ್ಕದ್ದಲ್ಲ.

**27. ಅಂಚೆಯ ಮೂಲಕ ಜಾರಿ ಎಂಬುದರ ಅರ್ಥ.–** ಈ ಅಧಿನಿಯಮವು ಪ್ರಾರಂಭವಾದ ತರುವಾಯ ರಚಿಸಲಾದ ಯಾವುದೇ [1][ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][1]ವು ಯಾವುದೇ ದಸ್ತಾವೇಜನ್ನು ಅಂಚೆಯ ಮೂಲಕ ಜಾರಿ ಮಾಡಲು ಅಧಿಕೃತಗೊಳಿಸಿದ್ದಲ್ಲಿ ಅಥವಾ ಅಗತ್ಯಪಡಿಸಿದ್ದಲ್ಲಿ, "ಜಾರಿ ಮಾಡತಕ್ಕದ್ದು" ಎಂಬ ಪದಾವಳಿಯನ್ನಾಗಲಿ, ಅಥವಾ "ಕೊಡತಕ್ಕದ್ದು" ಅಥವಾ "ಕಳುಹಿಸತಕ್ಕದ್ದು" ಎಂಬ ಪದಾವಳಿಗಳಲ್ಲಿ ಯಾವುದನ್ನಾದರೂ ಅಥವಾ ಇನ್ನಾವುದೇ

ಪದಾವಳಿಗಳಲ್ಲಿ ಯಾವುದನ್ನಾದರೂ ಅಥವಾ ಇನ್ನಾವುದೇ ಪದಾವಳಿಯನ್ನು ಉಪಯೋಗಿಸಿರಲಿ, ಬೇರೆಯ ಉದ್ದೇಶವು ಕಂಡು ಬಂದ ಹೊರತು, ದಸ್ತಾವೇಜನ್ನು ಒಳಗೊಂಡಿರುವ ಪತ್ರವನ್ನು ಸರಿಯಾಗಿ ವಿಳಾಸ ಬರೆದು ಪೂರ್ವ ಸಂದಾಯ ಮಾಡಿ ನೋಂದಾಯಿತ ಅಂಚೆಯಲ್ಲಿ ಕಳುಹಿಸುವ ಮೂಲಕ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ತದ್ವಿರುದ್ಧವಾಗಿ ರುಜುವಾತಾದ ಹೊರತು, ಅಂಚೆಯ ಸಾಮಾನ್ಯ ರೀತಿಯಲ್ಲಿ ಅದು ಯಾವ ಕಾಲದಲ್ಲಿ ಬಟವಾಡೆಯಾಗುತ್ತಿತ್ತೋ ಆ ಕಾಲದಲ್ಲಿಯೇ ಜಾರಿ ಮಾಡಲಾಗಿದೆಯೆಂದು ಭಾವಿಸತಕ್ಕದ್ದು.

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**28. ಅಧಿನಿಯಮಿತಿಗಳನ್ನು ಉದಾಹರಿಸುವುದು.–** (1) ಯಾವುದೇ ಅಧಿನಿಯಮಿತಿಯಲ್ಲಿ ಮತ್ತು ಯಾವುದೇ ಅಧಿನಿಯಮಿತಿಯ ಮೇರೆಗೆ ಅಥವಾ ಅದಕ್ಕೆ ಸಂಬಂಧಿಸಿದಂತೆ ರಚಿಸಲಾದ ಯಾವುದೇ ನಿಯಮ, ಉಪವಿಧಿ, ಲಿಖಿತ ಅಥವಾ ದಸ್ತಾವೇಜಿನಲ್ಲಿ, ಯಾವುದೇ ಅಧಿನಿಯಮಿತಿಯನ್ನು ಅದಕ್ಕೆ ಕೊಡಲಾದ ಹೆಸರು ಅಥವಾ ಚಿಕ್ಕ ಹೆಸರು (ಯಾವುದಾದರೂ ಇದ್ದರೆ) ಅದನ್ನು ಅಥವಾ ಅದರ ಸಂಖ್ಯೆಯನ್ನು ಮತ್ತು ವರ್ಷವನ್ನು ಉಲ್ಲೇಖಿಸುವುದರ ಮೂಲಕ ಉದಾಹರಿಸಬಹುದು ಮತ್ತು ಒಂದು ಅಧಿನಿಯಮಿತಿಯಲ್ಲಿನ ಯಾವುದೇ ಉಪಬಂಧವನ್ನು, ಆ ಉಪಬಂಧವು ಇರುವ ಪ್ರಕರಣ ಅಥವಾ ಉಪಪ್ರಕರಣವನ್ನು ಉಲ್ಲೇಖಿಸುವ ಮೂಲಕ ಉದಾಹರಿಸಬಹುದು.

(2) ಈ ಅಧಿನಿಯಮದಲ್ಲಿ ಮತ್ತು ಈ ಅಧಿನಿಯಮವು ಪ್ರಾರಂಭವಾದ ತರುವಾಯ ರಚಿಸಲಾದ [1][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][1] ದಲ್ಲಿ ಇರುವ ಇನ್ನೊಂದು ಅಧಿನಿಯಮಿತಿಯ ಭಾಗದ ವಿವರಣೆ ಅಥವಾ ಉದಾಹರಣೆಯನ್ನು ಬೇರೆಯ ಉದ್ದೇಶವು ಕಂಡುಬಂದ ಹೊರತು, ವಿವರಣೆ ಅಥವಾ ಉದಾಹರಣೆಯಲ್ಲಿರುವ ಭಾಗದ ಆರಂಭವೆಂದು ಮತ್ತು ಕೊನೆಯೆಂದು ಹೇಳಲಾದ ಅಥವಾ ಉಲ್ಲೇಖಿಸಲಾದ ಪದ, ಪ್ರಕರಣ ಅಥವಾ ಇತರ ಭಾಗವನ್ನು ಅದು ಒಳಗೊಳ್ಳುವುದೆಂದು ಅರ್ಥೈಸತಕ್ಕದ್ದು. ಹೇಳಲಾದ ಅಥವಾ ಉಲ್ಲೇಖಿಸಲಾದ ಪದ, ಪ್ರಕರಣ ಅಥವಾ

1. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

**29. ಹಿಂದಿನ ಅಧಿನಿಯಮಿತಿ, ನಿಯಮ ಮತ್ತು ಉಪವಿಧಿಗಳನ್ನು ಉಳಿಸುವುದು.–** ಈ ಅಧಿನಿಯಮದ ಪ್ರಾರಂಭದ ತರುವಾಯ ರಚಿಸಲಾದ ಅಧಿನಿಯಮಿತಿಗಳ, ನಿಯಮಗಳ ಅಥವಾ ಉಪವಿಧಿಗಳ ಅರ್ಥಾನ್ವಯಕ್ಕೆ ಸಂಬಂಧಿಸಿದ ಈ ಅಧಿನಿಯಮದ ಉಪಬಂಧಗಳು, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಲಾದ ಯಾವುದೇ ಅಧಿನಿಯಮಿತಿ, ನಿಯಮ ಅಥವಾ ಉಪವಿಧಿಗಳ ಅರ್ಥಾನ್ವಯವನ್ನು, ಆ ಅಧಿನಿಯಮಿತಿ, ನಿಯಮ ಅಥವಾ ಉಪವಿಧಿಯನ್ನು ಈ ಅಧಿನಿಯಮದ ಪ್ರಾರಂಭದ ತರುವಾಯ ರಚಿಸಿದ ಅಧಿನಿಯಮಿತಿ, ನಿಯಮ ಅಥವಾ ಉಪವಿಧಿಯ ಮೂಲಕ ಮುಂದುವರೆಸಿದ್ದರೂ ಅಥವಾ ತಿದ್ದುಪಡಿ ಮಾಡಿದ್ದರೂ ಬಾಧಿಸತಕ್ಕದ್ದಲ್ಲ.

[1][**30. ಆದೇಶಗಳನ್ನು ಮತ್ತು ಅಧಿಸೂಚನೆಗಳನ್ನು ರಾಜಪತ್ರದಲ್ಲಿ ಪ್ರಕಟಿಸುವುದು.–** [2][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][2]ದಲ್ಲಿ ಅಥವಾ [2][ಯಾವುದೇ ಮೈಸೂರು ಅಧಿನಿಯಮ ಅಥವಾ ಕರ್ನಾಟಕ ಅಧಿನಿಯಮ][2]ದ ಮೇರೆಗೆ ರಚಿಸಲಾದ ಯಾವುದೇ ನಿಯಮದಲ್ಲಿ, ಯಾವುದೇ ಆದೇಶವನ್ನು, ಅಧಿಸೂಚನೆಯನ್ನು ಅಥವಾ ಇತರ ವಿಷಯವನ್ನು ಅಧಿಸೂಚಿಸತಕ್ಕದ್ದೆಂದು ಅಥವಾ ಪ್ರಕಟಿಸತಕ್ಕದ್ದೆಂದು ನಿರ್ದೇಶಿಸಲಾಗಿರುವಲ್ಲಿ, ಅಂಥ ಅಧಿಸೂಚನೆ ಅಥವಾ ಪ್ರಕಟಣೆಯನ್ನು, ಆ ಅಧಿನಿಯಮವು ಅನ್ಯಥಾ ಉಪಬಂಧಿಸಿದ ಹೊರತು, ಅದನ್ನು ರಾಜಪತ್ರದಲ್ಲಿ ಪ್ರಕಟಿಸಿದರೆ, ಅದನ್ನು ಯುಕ್ತವಾಗಿ ಪ್ರಕಟಿಸಲಾಗಿದೆಯೆಂದು ಭಾವಿಸತಕ್ಕದ್ದು.

**31. ಸರ್ಕಾರವು ಕೆಲವು ಸ್ಥಳಗಳಿಗೆ ವಿಸ್ತರಿಸಿದ ಅಥವಾ ಅನ್ವಯಿಸಿದ ಅಧಿನಿಯಮಗಳು ಅಥವಾ ಅಧಿನಿಯಮಗಳ ಉಪಬಂಧಗಳು ಯಾವ ಕಾಲಗಳಲ್ಲಿ ಜಾರಿಗೆ ಬರತಕ್ಕದ್ದೋ ಆ ಕಾಲಗಳನ್ನು ನಿರ್ಧರಿಸುವುದು.–** ಅಧಿನಿಯಮದ ಮೂಲಕ, ಸರ್ಕಾರವು, ರಾಜ್ಯದಲ್ಲಿನ ಯಾವುದೇ ಸ್ಥಳಕ್ಕೆ, ಅಥವಾ ರಾಜ್ಯದ ಯಾವುದೇ ಭಾಗಕ್ಕೆ ಅಧಿನಿಯಮವನ್ನು ಅಥವಾ ಅಧಿನಿಯಮದ ಯಾವುದೇ ಉಪಬಂಧವನ್ನು ವಿಸ್ತರಿಸಲು ಅಥವಾ ಅನ್ವಯಿಸಲು ಅಧಿಕಾರವನ್ನು ಹೊಂದಿರುವಾಗ, ಸರ್ಕಾರವು ಅಂಥ ಅಧಿನಿಯಮ ಅಥವಾ ಉಪಬಂಧವನ್ನು ವಿಸ್ತರಿಸುವ ಅಥವಾ ಅನ್ವಯಿಸುವ ಯಾವುದೇ ಆದೇಶದಲ್ಲಿ ಅಥವಾ ತರುವಾಯದ ಯಾವುದೇ ಆದೇಶದಲ್ಲಿ, ಆ ಕಾಲವನ್ನು ಅಥವಾ ಉಪಬಂಧವನ್ನು ಅಧಿಸೂಚಿಸಬಹುದು ಅಥವಾ ತರುವಾಯದ ಯಾವುದೇ ಆದೇಶದಲ್ಲಿ ಅದನ್ನು ಹಾಗೆ ವಿಸ್ತರಿಸಲಾಗಿರುವಂಥ ಅಥವಾ ಅನ್ವಯಿಸಲಾಗಿರುವಂಥ ರಾಜ್ಯದಲ್ಲಿನ ಸ್ಥಳದಲ್ಲಿ ಅಥವಾ ರಾಜ್ಯದ ಭಾಗದಲ್ಲಿ ಅದು ಜಾರಿಗೆ ಬರತಕ್ಕ ಕಾಲವನ್ನು ಅಧಿಸೂಚಿಸಬಹುದು; ಮತ್ತು ಆ ಅಧಿನಿಯಮದಲ್ಲಿ, ಅನ್ಯಥಾ ಉಪಬಂಧಿಸಿರುವ ಹೊರತು, ಸರ್ಕಾರವು, ಕಾಲಕಾಲಕ್ಕೆ ರಾಜಪತ್ರದಲ್ಲಿ ಅಧಿಸೂಚನೆ ಹೊರಡಿಸಿ, ರಾಜ್ಯದಲ್ಲಿನ ಅಂಥ ಸ್ಥಳಕ್ಕೆ ಅಥವಾ ರಾಜ್ಯದ ಭಾಗಕ್ಕೆ ಅದನ್ನು ವಿಸ್ತರಿಸುವ ಅಥವಾ ಅನ್ವಯಿಸುವ ಆದೇಶವನ್ನು ರದ್ದುಪಡಿಸಲು ಆ ಅಧಿನಿಯಮವು ಅಥವಾ ಉಪಬಂಧವು ರಾಜ್ಯದ ಅಂಥ ಸ್ಥಳದಲ್ಲಿ ಅಥವಾ ರಾಜ್ಯದ ಭಾಗದಲ್ಲಿ ಜಾರಿಗೆ ಬರತಕ್ಕ ಕಾಲವನ್ನು ಮುಂದೂಡಬಹುದು:

ಪರಂತು, ಅಧಿನಿಯಮವು ಅಥವಾ ಉಪಬಂಧಗಳು ಜಾರಿಗೆ ಬರತಕ್ಕ ಕಾಲವನ್ನು ಮುಂದೂಡುವ ಆದೇಶವನ್ನು ಅಥವಾ ಅದನ್ನು ವಿಸ್ತರಿಸುವ ಅಥವಾ ಅನ್ವಯಿಸುವ ಆದೇಶವನ್ನು ರದ್ದುಗೊಳಿಸುವ ಯಾವುದೇ ಆದೇಶವನ್ನು, ಅಂಥ ಆದೇಶವು ಸಂಬಂಧಪಡುವ ರಾಜ್ಯದ ಆ ಸ್ಥಳದಲ್ಲಿ ಅಥವಾ ಭಾಗದಲ್ಲಿ ಅಧಿನಿಯಮವು ಅಥವಾ ಉಪಬಂಧವು ವಾಸ್ತವವಾಗಿ ಜಾರಿಗೆ ಬಂದ ತರುವಾಯ ಮಾಡತಕ್ಕದ್ದಲ್ಲ.

[3][**31ಎ. ಕೆಲವು ಕಾನೂನುಗಳಿಗೆ ಮಾಡಿದ ಉಲ್ಲೇಖಗಳ ಅರ್ಥಾನ್ವಯ.–** ಮುಂಬಯಿ ಪ್ರದೇಶ, ಹೈದರಾಬಾದ್ ಪ್ರದೇಶ, ಮದರಾಸು ಪ್ರದೇಶ ಅಥವಾ ಕೊಡಗು ಜಿಲ್ಲೆಯಲ್ಲಿ ಜಾರಿಯಲ್ಲಿಲ್ಲದ ಮೈಸೂರು ಅಧಿನಿಯಮಕ್ಕೆ ಯಾವುದೇ [2][ಕರ್ನಾಟಕ ಅಧಿನಿಯಮ][2]ದಲ್ಲಿ ಅಂಥ ಪ್ರದೇಶ ಅಥವಾ ಜಿಲ್ಲೆಗೆ ಸಂಬಂಧಪಟ್ಟಂತೆ ಮಾಡಿರುವ ಯಾವುದೇ ಉಲ್ಲೇಖವನ್ನು ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಅಂಥ ಪ್ರದೇಶ ಅಥವಾ ಜಿಲ್ಲೆಯಲ್ಲಿ ಜಾರಿಯಲ್ಲಿರುವ ಸಂವಾದಿ ಕಾನೂನು, ಯಾವುದಾದರೂ ಇದ್ದರೆ, ಅದಕ್ಕೆ ಮಾಡಿರುವ ಉಲ್ಲೇಖವೆಂಬುದಾಗಿ ಅರ್ಥೈಸತಕ್ಕದ್ದು.][3]

**32. ಅಧ್ಯಾದೇಶಗಳಿಗೆ ಅಧಿನಿಯಮದ ಅನ್ವಯ.–** ಈ ಅಧಿನಿಯಮದ ಉಪಬಂಧಗಳು ಸಂವಿಧಾನದ 213ನೇ ಅನುಚ್ಛೇದದ ಅಡಿಯಲ್ಲಿ [3][ರಾಜ್ಯಪಾಲರು][3] ಹೊರಡಿಸಿದ ಯಾವುದೇ ಅಧ್ಯಾದೇಶದ ಸಂಬಂಧದಲ್ಲಿ, ಅವು ರಾಜ್ಯ ವಿಧಾನಮಂಡಲವು ಮಾಡಿದ [2][ಕರ್ನಾಟಕ ಅಧಿನಿಯಮಗಳಿಗೆ][2] ಸಂಬಂಧಪಟ್ಟಂತೆ ಅನ್ವಯವಾಗುವ ರೀತಿಯಲ್ಲಿಯೇ ಅನ್ವಯವಾಗತಕ್ಕದ್ದು:

ಪರಂತು, ಈ ಅಧಿನಿಯಮದ 5ನೇ ಪ್ರಕರಣದ (1)ನೇ ಉಪಪ್ರಕರಣವು, ರಾಜಪತ್ರದಲ್ಲಿ ಅಧಿನಿಯಮಕ್ಕೆ ದೊರೆತ ಸಮ್ಮತಿಯ ಬಗ್ಗೆ ಮೊದಲು ಪ್ರಕಟವಾದ ದಿನಾಂಕಕ್ಕೆ ಆ ಉಪಪ್ರಕರಣದಲ್ಲಿ ಮಾಡಲಾದ ಉಲ್ಲೇಖವು, ಆ ರಾಜಪತ್ರದಲ್ಲಿ ಅಧ್ಯಾದೇಶವನ್ನು ಮೊದಲು ಪ್ರಕಟಿಸಿದ ದಿನಾಂಕಕ್ಕೆ

ಬದಲಾಗಿ ಮಾಡಿದ ಉಲ್ಲೇಖವಾಗಿದ್ದಿದ್ದರೆ ಹೇಗೋ ಹಾಗೆ ಅಂಥ ಯಾವುದೇ ಅಧ್ಯಾದೇಶಕ್ಕೆ ಅನ್ವಯವಾಗತಕ್ಕದ್ದು.][1]

1. 1953ರ ಅಧಿನಿಯಮ ಸಂಖ್ಯೆ 12ರ ಮೂಲಕ 30, 31 ಮತ್ತು 32ನೇ ಪ್ರಕರಣಗಳನ್ನು ಪ್ರತಿಯೋಜಿಸಲಾಗಿದೆ.

2. 1973ರ ಕರ್ನಾಟಕ ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1973ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.
3. 1956ರ ಮೈಸೂರು ಕಾನೂನುಗಳ ಅಳವಡಿಕೆ ಆದೇಶದ ಮೂಲಕ 1.11.1956ರಿಂದ ಜಾರಿಗೆ ಬರುವಂತೆ ಅಳವಡಿಸಲಾಗಿದೆ.

* * * * *

The above translation of the Karnataka General Clauses Act 1899 shall be the authoritative text in Kannada Language under section 5A of the Karnataka Official Language Act, 1963 (Karnataka Act No. 26 of 1963)

**GOVERNOR OF KARNATAKA**

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು
ಅವರ ಹೆಸರಿನಲ್ಲಿ,

**(ಮ.ರಾ. ಹೆಗಡೆ)**
ಸರ್ಕಾರದ ಕಾರ್ಯದರ್ಶಿ,
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.